Re. No. D. 221

भारत का राजपत्र
The Gazette of India
ಭಾರತ ರಾಜ ಪತ್ರ

( EXTRAORDINARY )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಸಲಾಗಿದೆ.

| | | | |
|---|---|---|---|
| सं. २ | नई दिल्ली, मंगलवार, जून २१, २०११ | ज्येष्ठ ३१, १९३३ (शका) | खंड. ४६ |
| No. 2 | New Delhi, Tuesday, June 21, 2011 | Jyeishta 31, 1933 (Saka) | Vol. 46 |
| ಸಂ. ೨ | ನವ ದೆಹಲಿ, ಮಂಗಳವಾರ, ಜೂನ್ ೨೧, ೨೦೧೧ | ಜ್ಯೇಷ್ಠ ೩೧, ೧೯೩೩ (ಶಕ) | ಸಂಪುಟ. ೪೬ |


**Ministry of Law and Justice**

(Legislative Department)

New Delhi, 21st June, 2011

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

ನವದೆಹಲಿ, 21ನೇ ಜೂನ್, 2011

The Translation in Kannada of the following Acts, namely :- (1) The Atomic Energy Act, 1962 (2) The Insurance Regulatory and Development Authority Act, 1999 - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :– (1) ಅಣುಶಕ್ತಿ ಅಧಿನಿಯಮ, 1962 (2) ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಅಣುಶಕ್ತಿ ಅಧಿನಿಯಮ, 1962

(1962ರ ಅಧಿನಿಯಮ ಸಂಖ್ಯೆ 33)

[15ನೇ ಸೆಪ್ಟೆಂಬರ್, 1962]

ಭಾರತದ ಜನತೆಯ ಕಲ್ಯಾಣಕ್ಕಾಗಿ ಮತ್ತು ಇತರ ಶಾಂತಿಯುತ ಉದ್ದೇಶಗಳಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಅಣುಶಕ್ತಿಯನ್ನು ಅಭಿವೃದ್ಧಿಗೊಳಿಸಲು, ನಿಯಂತ್ರಿಸಲು ಮತ್ತು ಅದನ್ನು ಉಪಯೋಗಿಸಲು ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಹದಿಮೂರನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಅಣುಶಕ್ತಿ ಅಧಿನಿಯಮ, 1962 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಂಥ* ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು ಮತ್ತು ಅರ್ಥವಿವರಣೆ.**– (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಣುಶಕ್ತಿ" ಎಂದರೆ, ಅಣುವಿಭಜನೆ ಮತ್ತು ಒಂದುಗೂಡಿಸುವಿಕೆಯ ಪ್ರಕ್ರಿಯೆಗಳೂ ಸೇರಿದಂತೆ, ಯಾವುದೇ ಪ್ರಕ್ರಿಯೆಯ ಪರಿಣಾಮವಾಗಿ ನ್ಯೂಕ್ಲಿಯರ್‌ಗಳಿಂದ ಬಿಡುಗಡೆಗೊಂಡ ಶಕ್ತಿ ಎಂದು ಅರ್ಥ;

(ಬಿ) "ವಿಭಜನಾ ಸಾಮಗ್ರಿ" ಎಂದರೆ, ಯುರೇನಿಯಂ 233, ಯುರೇನಿಯಂ 235, ಪ್ಲುಟೋನಿಯಂ ಅಥವಾ ಈ ಪದಾರ್ಥಗಳನ್ನು ಒಳಗೊಂಡ ಯಾವುದೇ ಸಾಮಗ್ರಿ ಅಥವಾ ವಿಭಜನಾ ಸಾಮಗ್ರಿಯೆಂದು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಬಹುದಾದ ಇತರ ಯಾವುದೇ ಸಾಮಗ್ರಿ ಎಂದು ಅರ್ಥ;

(ಬಿಬಿ) "ಸರ್ಕಾರಿ ಕಂಪನಿ" ಎಂದರೆ, ಕೇಂದ್ರ ಸರ್ಕಾರವು ಶೇಕಡಾ ಐವತ್ತೊಂದರಷ್ಟಕ್ಕಿಂತ ಕಡಿಮೆಯಾಗಿರದಷ್ಟು ಸಂದಾಯಿತ ಷೇರು ಬಂಡವಾಳವನ್ನು ಹೊಂದಿರುವ ಒಂದು ಕಂಪನಿ ಎಂದು ಅರ್ಥ;

(ಸಿ) "ಖನಿಜಗಳು" ಎಂಬುದರಲ್ಲಿ, ಭೂಮಿಯ ಅಥವಾ ಅದರ ಮೇಲಿನ ಕೆಲಸದಿಂದ ತೆಗೆದ ಮಣ್ಣಿನಿಂದ (ಅಲುವಿಯಂ ಅಥವಾ ಬಂಡೆಗಳೂ ಸೇರಿದಂತೆ) ಪಡೆದ ಅಥವಾ ಪಡೆಯಬಹುದಾದ ಎಲ್ಲ ಪದಾರ್ಥಗಳು ಒಳಗೊಳ್ಳುತ್ತವೆ;

(ಡಿ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ಎಂದು ಅರ್ಥ;

(ಇ) "ಸ್ಥಾವರ" ಎಂಬುದರಲ್ಲಿ, ನೆಲಕ್ಕೆ ಜೋಡಿಸಿರುವ ಅಥವಾ ಜೋಡಿಸಿಲ್ಲದಿರುವ ಯಂತ್ರೋಪಕರಣಗಳು, ಸಾಧನ ಸಾಮಗ್ರಿ ಅಥವಾ ಉಪಕರಣಗಳು ಒಳಗೊಳ್ಳುತ್ತವೆ;

(ಎಫ್) "ನಿಯಮಿಸಿದ ಸಾಧನ ಸಾಮಗ್ರಿ" ಎಂದರೆ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಿಸುವ, ಅದರ ಅಭಿಪ್ರಾಯದಲ್ಲಿ, ಯಾವುದೇ ನಿಯಮಿಸಿದ ಪದಾರ್ಥದ ಉತ್ಪಾದನೆಗೆ ಅಥವಾ

*ಸೆಪ್ಟೆಂಬರ್ 21, 1962 ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 1254 ದಿನಾಂಕ 18.09.1962 – ಭಾರತ ವಿಶೇಷ ರಾಜಪತ್ರ – ಭಾಗ– II, ಸೆಕ್ಷನ್ 3 (i) ಪುಟ – 381.

ಬಳಕೆಗೆ ಅಥವಾ ಅಣುಶಕ್ತಿ, ಅಣುವಿಕಿರಣಕಾರಿ ಪದಾರ್ಥಗಳು ಅಥವಾ ಅಣುವಿಕಿರಣದ ಉತ್ಪಾದನೆ ಅಥವಾ ಅದರ ಬಳಕೆಗೆ ಉಪಯೋಗಿಸಿದ ಅಥವಾ ಉಪಯೋಗಿಸುವ ಉದ್ದೇಶದಿಂದ ವಿಶೇಷವಾಗಿ ರೂಪಿಸಿದ ಅಥವಾ ಅಳವಡಿಸಿದ ಪದಾರ್ಥ ಎಂದು ಅರ್ಥ. ಆದರೆ, ಅದು ಹಾಗೆ ವಿಶೇಷವಾಗಿ ವಿನ್ಯಾಸಗೊಳಿಸದೇ ಇರುವ ಅಥವಾ ಅಳವಡಿಸದೇ ಇರುವ ಅಥವಾ ಮೇಲೆ ಹೇಳಿದ ಯಾವುವೇ ಉದ್ದೇಶಗಳಿಗಾಗಿ ಬಳಸುವ ಅಥವಾ ಬಳಸಲು ಉದ್ದೇಶಿಸಿದ ಸಾಧನ ಸಾಮಗ್ರಿಯಲ್ಲಿ ಸೇರಿಸದೆ ಇರುವ ಗಣಿಗಾರಿಕೆ, ಗಿರಣಿ ನಡೆಸುವುದು, ಪ್ರಯೋಗ ಶಾಲೆ ಮತ್ತು ಇತರ ಸಾಧನ ಸಾಮಗ್ರಿಯು ಇದರಲ್ಲಿ ಒಳಗೊಳ್ಳುವುದಿಲ್ಲ;

(ಜಿ) "ನಿಯಮಿಸಿದ ಪದಾರ್ಥ" ಎಂದರೆ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಿಸಬಹುದಾದ ಯಾವುದೇ ಖನಿಜವೂ ಸೇರಿದಂತೆ, ಅದರ ಅಭಿಪ್ರಾಯದಲ್ಲಿ ಅಣುಶಕ್ತಿಯ ಉತ್ಪಾದನೆ ಅಥವಾ ಬಳಕೆಗಾಗಿ ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಂಶೋಧನೆಗಾಗಿ ಉಪಯೋಗಿಸಿದ ಅಥವಾ ಉಪಯೋಗಿಸಬಹುದಾದ ಒಂದು ಪದಾರ್ಥ ಎಂದು ಅರ್ಥ ಮತ್ತು ಇದರಲ್ಲಿ, ಯುರೇನಿಯಂ, ಪ್ಲುಟೋನಿಯಂ, ಥೋರಿಯಂ, ಬೆರಿಲಿಯಂ, ಡುಟೇರಿಯಂ ಅಥವಾ ಅವುಗಳ ಸಂಬಂಧಿ ಉತ್ಪನ್ನಗಳು ಅಥವಾ ಸಂಯುಕ್ತಗಳು ಅಥವಾ ಮೇಲೆ ಹೇಳಿದ ಯಾವುವೇ ಪದಾರ್ಥಗಳನ್ನೊಳಗೊಂಡ ಇತರ ಯಾವುದೇ ಸಾಮಗ್ರಿಗಳು ಒಳಗೊಳ್ಳುತ್ತವೆ;

(ಹೆಚ್) "ವಿಕಿರಣ" ಎಂದರೆ, ಗಾಮಾ ಕಿರಣಗಳು, ಕ್ಷ-ಕಿರಣಗಳು ಮತ್ತು ಅಲ್ಫಾ ಕಣಗಳು, ಬೀಟಾ ಕಣಗಳು, ನ್ಯೂಟ್ರಾನ್‌ಗಳು, ಪ್ರೋಟಾನ್‌ಗಳು ಮತ್ತು ಇತರ ನ್ಯೂಕ್ಲಿಯರ್ ಮತ್ತು ಉಪ ಅಣುಕಣಗಳನ್ನು ಒಳಗೊಂಡ ಕಿರಣಗಳು ಎಂದು ಅರ್ಥ; ಆದರೆ ಶಬ್ದ ಅಥವಾ ರೇಡಿಯೋ ತರಂಗಗಳು, ಅಥವಾ ಗೋಚರವಾಗುವ, ಇನ್‌ಫ್ರಾರೆಡ್ ಅಥವಾ ಅತಿನೇರಳೆ ಕಿರಣಗಳು ಅಲ್ಲ;

(ಐ) "ವಿಕಿರಣಕಾರಿ ಪದಾರ್ಥ" ಅಥವಾ ವಿವಿಕಿರಣಕಾರಿ ಸಾಮಗ್ರಿಹಿ ಎಂದರೆ, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ಮಟ್ಟಕ್ಕಿಂತ ಅಧಿಕವಾಗಿ ವಿಕಿರಣವನ್ನು ಸ್ವಾಭಾವಿಕವಾಗಿ ಹೊರಸೂಸುವ ಯಾವುದೇ ಪದಾರ್ಥ ಅಥವಾ ಸಾಮಗ್ರಿ ಎಂದು ಅರ್ಥ.

(2) ಖನಿಜಗಳ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು ಖನಿಜಗಳ ಗಣಿಗಾರಿಕೆ, ಪಡೆಯುವಿಕೆ, ಒಯ್ಯುವಿಕೆ, ಸಾಗಾಣಿಕೆ, ವಿಂಗಡಿಸುವಿಕೆ, ಹೊರತೆಗೆಯುವಿಕೆ ಅಥವಾ ಅವುಗಳನ್ನು ಅನ್ಯಥಾ ಸಂಸ್ಕರಿಸುವಿಕೆ – ಇವುಗಳನ್ನು ಒಳಗೊಂಡಿದೆ ಎಂದು ಅರ್ಥೈಸತಕ್ಕದ್ದು.

(3) ಅಣುಶಕ್ತಿಯ ಉತ್ಪಾದನೆ ಅಥವಾ ಅದರ ಬಳಕೆಗೆ ಈ ಅಧಿನಿಯಮದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು, ಅಂತಹ ಉತ್ಪಾದನೆ ಅಥವಾ ಬಳಕೆಗೆ ಸಂಬಂಧಿಸಿದಂತೆ ಸಿದ್ಧತೆಯ ಅಥವಾ ಸಹಾಯಕವಾದ ಯಾವುದೇ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸಲು ಮಾಡಿದ ಉಲ್ಲೇಖವೂ ಅದರಲ್ಲಿ ಸೇರಿದೆ ಎಂದು ಅರ್ಥೈಸತಕ್ಕದ್ದು.

**3. ಕೇಂದ್ರ ಸರ್ಕಾರದ ಸಾಮಾನ್ಯ ಅಧಿಕಾರಗಳು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೇಂದ್ರ ಸರ್ಕಾರವು,–

(ಎ) ಸ್ವತಃ ತಾನೇ ಆಗಲಿ ಅಥವಾ ತನ್ನಿಂದ ಸ್ಥಾಪಿತವಾದ ಯಾವುದೇ ಪ್ರಾಧಿಕಾರದ ಅಥವಾ ನಿಗಮದ ಮೂಲಕವಾಗಲೀ ಅಥವಾ ಒಂದು ಸರ್ಕಾರಿ ಕಂಪನಿಯ ಮೂಲಕವಾಗಲೀ ಅಣುಶಕ್ತಿಯನ್ನು ಉತ್ಪಾದಿಸಲು, ಅಭಿವೃದ್ಧಿಗೊಳಿಸಲು, ಬಳಸಲು ಮತ್ತು ವಿಲೇ ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ಯಾವುವೇ ವಿಷಯಗಳಲ್ಲಿ ಸಂಶೋಧನೆಯನ್ನು ನಡೆಸಲು;

(ಬಿ) ಅಣುಶಕ್ತಿಯ ಉತ್ಪಾದನೆ, ಅಭಿವೃದ್ಧಿ ಅಥವಾ ಬಳಕೆಗೆ ಸಂಬಂಧಿಸಿದ ಅಥವಾ ಮೇಲೆ ಹೇಳಿದಂಥ ಸಂಶೋಧನೆಗೆ ಅವಶ್ಯಕವಾಗಿರುವುದೆಂದು ಅಥವಾ ಅವಶ್ಯಕವಾಗುವ ಸಂಭವವಿದೆಯೆಂದು ತಾನು ಅಭಿಪ್ರಾಯಪಡುವ ಯಾವುದೇ ನಿಯಮಿಸಿದ ಅಥವಾ ಅಣುವಿಕಿರಣಕಾರಿ ಪದಾರ್ಥದ ಮತ್ತು

ಯಾವುವೇ ವಸ್ತುಗಳನ್ನು ತಯಾರಿಸಲು ಅಥವಾ ಅನ್ಯಥಾ ಉತ್ಪಾದಿಸಲು, ಖರೀದಿಸಲು ಅಥವಾ ಅನ್ಯಥಾ ಆರ್ಜಿಸಲು, ಸಂಗ್ರಹಿಸಲು ಮತ್ತು ಹಾಗೆ ನಿಯಮಿಸಿದ ಅಥವಾ ಅಣುವಿಕಿರಣಕಾರಿ ಪದಾರ್ಥವನ್ನು ಅಥವಾ ತಯಾರಿಸಲಾದ ಅಥವಾ ಅನ್ಯಥಾ ಉತ್ಪಾದಿಸಲಾದ ಯಾವುವೇ ವಸ್ತುಗಳನ್ನು ವಿಲೇವಾರಿ ಮಾಡಲು;

(ಬಿಬಿ) (i) ಅಣುಶಕ್ತಿಯ ಉತ್ಪಾದನೆ, ಅಭಿವೃದ್ಧಿ ಅಥವಾ ಬಳಕೆಯ ಸಂಬಂಧದಲ್ಲಿ ಅವಶ್ಯವಾಗಬಹುದೆಂದು ಅಥವಾ ಅವಶ್ಯಕವಾಗುವ ಸಂಭವವಿದೆಯೆಂದು ಅಭಿಪ್ರಾಯಪಡುವ ಯಾವುದೇ ನಿಯಮಿಸಿದ ಅಥವಾ ಅಣುವಿಕಿರಣಕಾರಿ ಪದಾರ್ಥಗಳು ಮತ್ತು ಯಾವುವೇ ವಸ್ತುಗಳನ್ನು ಖರೀದಿಸಲು ಅಥವಾ ಅನ್ಯಥಾ ಆರ್ಜಿಸಲು, ಸಂಗ್ರಹಿಸಲು, ಮತ್ತು ಸಾಗಿಸಲು; ಮತ್ತು

(ii) ತಾನು ಖರೀದಿಸಿದ ಅಥವಾ ಅನ್ಯಥಾ ಆರ್ಜಿಸಿದ ಅಂಥ ನಿಯಮಿಸಿದ ಅಥವಾ ಅಣುವಿಕಿರಣಕಾರಿ ಪದಾರ್ಥವನ್ನು ಅಥವಾ ಯಾವುವೇ ವಸ್ತುಗಳನ್ನು ವಿಲೇ ಮಾಡಲು

– ಅಧಿಕಾರ ಹೊಂದಿರತಕ್ಕದ್ದು.

(ಸಿ) ಇಲ್ಲಿಯವರೆಗೆ ಪ್ರಕಟವಾಗದಿರುವ ಅಥವಾ ಅನ್ಯಥಾ ಬಹಿರಂಗಗೊಳಿಸದಿರುವ,–

(i) ನಿಯಮಿಸಿದ ಪದಾರ್ಥಗಳ ಸ್ಥಳ, ಗುಣಮಟ್ಟ ಮತ್ತು ಪರಿಮಾಣ ಮತ್ತು ಅವುಗಳನ್ನು ಖರೀದಿಯ ಮೂಲಕವಾಗಲಿ ಅಥವಾ ಅನ್ಯಥಾ ಆಗಲಿ ಅಥವಾ ವಿಲೇವಾರಿಯ ಮೂಲಕವಾಗಲಿ, ಮಾರಾಟದ ಮೂಲಕವಾಗಲಿ ಅಥವಾ ಅನ್ಯಥಾ ಆಗಲಿ ಅವುಗಳ ಆರ್ಜನೆಗೆ ಸಂಬಂಧಿಸಿದ ವ್ಯವಹಾರಗಳು;

(ii) ನಿಯಮಿಸಿದ ಪದಾರ್ಥಗಳನ್ನು ಸಂಸ್ಕರಿಸುವುದು ಮತ್ತು ಅವುಗಳಿಂದ ವಿಭಜನಾ ಸಾಮಗ್ರಿಗಳನ್ನು ತೆಗೆಯುವುದು ಅಥವಾ ಉತ್ಪಾದಿಸುವುದು;

(iii) ಯಾವುವೇ ನಿಯಮಿಸಿದ ಪದಾರ್ಥಗಳ ಸಂಸ್ಕರಣೆ ಮತ್ತು ಉತ್ಪಾದನೆಯ ಮತ್ತು ಐಸೋಟೋಪುಗಳ ಬೇರ್ಪಡಿಸುವಿಕೆಗಾಗಿ ಇರುವ ಸ್ಥಾವರಗಳ ಸಿದ್ಧಾಂತ, ವಿನ್ಯಾಸ, ನಿರ್ಮಾಣ ಮತ್ತು ಕಾರ್ಯಾಚರಣೆ;

(iv) ನ್ಯೂಕ್ಲಿಯರ್ ರಿಯಾಕ್ಟರ್‌ಗಳ ಸಿದ್ಧಾಂತ, ವಿನ್ಯಾಸ, ನಿರ್ಮಾಣ ಮತ್ತು ಕಾರ್ಯಾಚರಣೆ;

(v) (i) ರಿಂದ (iv)ರ ವರೆಗಿನ ಬಾಬುಗಳಲ್ಲಿ ಒಳಗೊಂಡ ಅಥವಾ ಅವುಗಳಿಂದ ಪಡೆದ ಪದಾರ್ಥಗಳ ಮತ್ತು ಸಂಸ್ಕರಣೆಗಳ ಮೇಲೆ ಸಂಶೋಧನೆ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಕಾರ್ಯ

– ಇವುಗಳಿಗೆ ಸಂಬಂದಿಸಿದ ಯಾವುದೇ ಮಾಹಿತಿಯನ್ನು "ನಿರ್ಬಂಧಿತ ಮಾಹಿತಿ" ಎಂದು ಘೋಷಿಸಲು;

(ಡಿ) ಅಣುಶಕ್ತಿಯ ಅಥವಾ ಯಾವುದೇ ನಿಯಮಿಸಿದ ಪದಾರ್ಥದ ಉತ್ಪಾದನೆ, ಸಂಸ್ಕರಣೆ, ಬಳಕೆ, ಅನ್ವಯ ಅಥವಾ ವಿಲೆವಾರಿಯ ಸಂಬಂಧದಲ್ಲಿ ಸಂಶೋಧನೆ, ವಿನ್ಯಾಸ ಅಥವಾ ಅಭಿವೃದ್ಧಿಯೂ ಸೇರಿದಂತೆ ಕೆಲಸ ನಡೆಯುತ್ತಿರುವ ಯಾವುದೇ ಪ್ರದೇಶ ಅಥವಾ ಆವರಣವನ್ನು "ನಿಷಿದ್ಧ ಪ್ರದೇಶ" ಎಂದು ಘೋಷಿಸಲು;

(ಇ) ಅಣುವಿಕಿರಣಕಾರಿ ಪದಾರ್ಥಗಳು ಅಥವಾ ಅಣುವಿಕಿರಣವನ್ನು ಉತ್ಪಾದಿಸುವ ಸ್ಥಾವರದ ಮೇಲೆ,–

(i) ಅಣುವಿಕಿರಣದ ಅಪಾಯಗಳನ್ನು ತಡೆಗಟ್ಟುವ;

(ii) ಸಾರ್ವಜನಿಕ ಸುರಕ್ಷತೆಯನ್ನು ಮತ್ತು ಅಣುವಿಕಿರಣಕಾರಿ ಪದಾರ್ಥಗಳು ಅಥವಾ ಅಣುವಿಕಿರಣವನ್ನು ಉತ್ಪಾದಿಸುವ ಸ್ಥಾವರಗಳನ್ನು ನಿರ್ವಹಿಸುವ ವ್ಯಕ್ತಿಗಳ ಸುರಕ್ಷತೆಯನ್ನು ಸಾಧಿಸುವ; ಮತ್ತು

E-3

(iii) ಅಣುವಿಕಿರಣಕಾರಿ ತ್ಯಾಜ್ಯ ವಸ್ತುಗಳ ಸುರಕ್ಷಿತ ವಿಲೇವಾರಿಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ

– ಅಣುವಿಕಿರಣಕಾರಿ ಪದಾರ್ಥಗಳ ಅಥವಾ ಅಣುವಿಕಿರಣವನ್ನು ಉತ್ಪಾದಿಸುವ ಸ್ಥಾವರಗಳ ಮೇಲೆ ನಿಯಂತ್ರಣವನ್ನು ಉಪಬಂಧಿಸಲು;

(ಎಫ್) ಸ್ವತಃ ತಾನೇ ಆಗಲಿ ಅಥವಾ ತನ್ನಿಂದ ಸ್ಥಾಪಿತವಾದ ಯಾವುದೇ ಪ್ರಾಧಿಕಾರದ ಅಥವಾ ನಿಗಮದ ಮೂಲಕ ಅಥವಾ ಒಂದು ಸರ್ಕಾರಿ ಕಂಪನಿಯ ಮೂಲಕವಾಗಲಿ ಅಣುಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಮತ್ತು ಸರಬರಾಜು ಮಾಡಲು ಹಾಗೂ ಅಂಥ ಉತ್ಪಾದನೆಗೆ ಮತ್ತು ಸರಬರಾಜಿಗೆ ಸಹಾಯಕವಾದ ಮತ್ತು ಅದಕ್ಕೆ ಪ್ರಾಸಂಗಿಕವಾದ ಎಲ್ಲ ವಿಷಯಗಳ ಸಂಬಂಧದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲು ಉಪಬಂಧ ಕಲ್ಪಿಸಲು; ಮತ್ತು

(ಜಿ) ಮೇಲೆ ಹೇಳಿದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಕೇಂದ್ರ ಸರ್ಕಾರವು ಅವಶ್ಯವೆಂದು ಅಥವಾ ಯುಕ್ತವೆಂದು ಪರಿಗಣಿಸಬಹುದಾದಂಥ ಎಲ್ಲ ಕಾರ್ಯಗಳನ್ನು (ಕಟ್ಟಡಗಳನ್ನು ನಿರ್ಮಿಸುವುದು ಮತ್ತು ಕಾಮಗಾರಿಗಳನ್ನು ನಿರ್ವಹಿಸುವುದು ಮತ್ತು ಖನಿಜಗಳ ಕಾರ್ಯಾಚರಣೆಯೂ ಸೇರಿದಂತೆ) ನಿರ್ವಹಿಸಲು

– ಅಧಿಕಾರ ಹೊಂದಿರತಕ್ಕದ್ದು.

**4. ಯುರೇನಿಯಂ ಅಥವಾ ಥೋರಿಯಂನ ಶೋಧನೆಯ ಅಧಿಸೂಚನೆ.–** (1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆಯಾಗಲಿ ಅಥವಾ ನಂತರವಾಗಲೀ, ಭಾರತದಲ್ಲಿ ಯಾವುದೇ ಸ್ಥಳದಲ್ಲಿ ಯುರೇನಿಯಂ ಅಥವಾ ಥೋರಿಯಂ ಇದೆಯೆಂಬುದನ್ನು ಶೋಧಿಸಿದ್ದ ಅಥವಾ ಶೋಧಿಸುವ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭದ ದಿನಾಂಕದ ನಂತರ ಮೂರು ತಿಂಗಳೊಳಗೆ ಅಥವಾ ಶೋಧನೆಯ ನಂತರ ಮೂರು ತಿಂಗಳೊಳಗೆ – ಇವುಗಳಲ್ಲಿ ಯಾವುದು ನಂತರವೋ ಆ ಅವಧಿಯೊಳಗೆ, ಆ ಶೋಧನೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ಅಥವಾ ಪ್ರಾಧಿಕಾರಕ್ಕೆ ಲಿಖಿತ ವರದಿ ಮಾಡತಕ್ಕದ್ದು.

(2) ಭಾರತದಲ್ಲಿ ಯಾವುದೇ ಸ್ಥಳದಲ್ಲಿ ಯುರೇನಿಯಂ ಆಗಲಿ ಅಥವಾ ಥೋರಿಯಂ ಆಗಲಿ ಇದೆ ಎಂದು ನಂಬಲು ಕಾರಣವಿರುವ ಪ್ರತಿಯೊಬ್ಬ ವ್ಯಕ್ತಿಯು, ವಿಳಂಬ ಮಾಡದೆ, ಅಂಥ ನಂಬಿಕೆಯ ಬಗ್ಗೆ ಮತ್ತು ಅದರ ಕಾರಣಗಳ ಬಗ್ಗೆ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಅಥವಾ ಮೇಲೆ ಹೇಳಿದಂತಹ ಯಾರೇ ವ್ಯಕ್ತಿಗೆ ಅಥವಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

**5. ಯುರೇನಿಯಂನ್ನು ಒಳಗೊಂಡ ಪದಾರ್ಥಗಳ ಗಣಿಗಾರಿಕೆ ಅಥವಾ ಸಾಂದ್ರೀಕರಣದ ಮೇಲೆ ನಿಯಂತ್ರಣ.–** (1) ಯಾವ ಪದಾರ್ಥದಿಂದ ಯುರೇನಿಯಂನ್ನು ಬೇರ್ಪಡಿಸಬಹುದಾಗಿದೆ ಅಥವಾ ಹೊರ ತೆಗೆಯಬಹುದಾಗಿದೆ ಎಂದು ಯುಕ್ತವಾಗಿ ನಿರೀಕ್ಷಿಸಬಹುದೋ ಆ ಯಾವುದೇ ಪದಾರ್ಥದ ಗಣಿಗಾರಿಕೆಯನ್ನು ಯಾರೇ ವ್ಯಕ್ತಿಯು, ನಡೆಸುತ್ತಿದ್ದಾನೆಂದು ಅಥವಾ ಗಣಿಗಾರಿಕೆಯನ್ನು ನಡೆಸುವ ಸಂಭವವಿದೆಯೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅಥವಾ ಯಾವ ಪದಾರ್ಥದಿಂದ ಯುರೇನಿಯಂ ಅನ್ನು ಬೇರ್ಪಡಿಸಬಹುದಾಗಿದೆಯೋ ಅಥವಾ ಹೊರ ತೆಗೆಯಬಹುದಾಗಿದೆಯೋ ಆ ಯಾವುದೇ ಪದಾರ್ಥವನ್ನು ಭೌತಿಕ, ರಾಸಾಯನಿಕ ಅಥವಾ ಲೋಹದ ಕಾರ್ಯವಿಧಾನದ ಮೂಲಕ ಪದಾರ್ಥವನ್ನು ಸಂಸ್ಕರಿಸುವ ಅಥವಾ ಸಾಂದ್ರೀಕರಿಸುವ ಕೆಲಸದಲ್ಲಿ ಅವನು ತೊಡಗಿದ್ದಾನೆಂದು ಅಥವಾ ತೊಡಗುವ ಸಂಭವವಿದೆಯೆಂದು, ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಆ ವ್ಯಕ್ತಿಗೆ ಲಿಖಿತ ನೋಟೀಸನ್ನು ನೀಡುವ ಮೂಲಕ,–

(ಎ) ಗಣಿ ಕಾರ್ಯಾಚರಣೆ ನಡೆಸುವಲ್ಲಿ ಅಥವಾ ಮೇಲೆ ತಿಳಿಸಿದ ಪದಾರ್ಥವನ್ನು ಸಂಸ್ಕರಿಸುವಲ್ಲಿ ಅಥವಾ ಸಾಂದ್ರೀಕರಿಸುವಲ್ಲಿ ಕೇಂದ್ರ ಸರ್ಕಾರವು ನೋಟೀಸಿನಲ್ಲಿ ಅಥವಾ ಆ ತರುವಾಯ ಕಾಲಕಾಲಕ್ಕೆ ನಿರ್ದಿಷ್ಟಪಡಿಸುವುದು ಯುಕ್ತವೆಂದು ಭಾವಿಸುವಂಥ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸುವಂತೆ ಮತ್ತು ಅಂಥ ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳುವಂತೆ ಅವನನ್ನು ಅಗತ್ಯಪಡಿಸಬಹುದು; ಅಥವಾ

(ಬಿ) ಗಣಿ ಕಾರ್ಯಾಚರಣೆಗಳನ್ನು ನಡೆಸುವುದರಿಂದ ಅಥವಾ ಮೇಲೆ ತಿಳಿಸಿದ ಪದಾರ್ಥವನ್ನು ಸಂಸ್ಕರಿಸುವುದರಿಂದ ಅಥವಾ ಸಾಂದ್ರೀಕರಿಸುವುದರಿಂದ ಅವನನ್ನು ಸಂಪೂರ್ಣವಾಗಿ ನಿಷೇಧಿಸಬಹುದು.

(2) (1)ನೇ ಉಪ–ಪ್ರಕರಣದ (ಎ) ಖಂಡದ ಮೇರೆಗೆ ಯಾವುವೇ ಗಣಿ ಕಾರ್ಯಾಚರಣೆಗಳನ್ನು ನಡೆಸುತ್ತಿರುವ ಅಥವಾ ಯಾವುದೇ ಪದಾರ್ಥವನ್ನು ಸಂಸ್ಕರಿಸುತ್ತಿರುವ ಅಥವಾ ಸಾಂದ್ರೀಕರಿಸುತ್ತಿರುವ ಯಾರೇ ವ್ಯಕ್ತಿಯ ಮೇಲೆ ಯಾವುವೇ ನಿಬಂಧನೆಗಳು ಮತ್ತು ಷರತ್ತುಗಳನ್ನು ವಿಧಿಸಲಾಗಿದ್ದರೆ, ಕೇಂದ್ರ ಸರ್ಕಾರವು, ಆ ನಿಬಂಧನೆಗಳು ಮತ್ತು ಷರತ್ತುಗಳ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು, ಆ ವ್ಯಕ್ತಿಗೆ ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡಬೇಕೇ ಅಥವಾ ಬೇಡವೇ ಎಂಬುದನ್ನು ತೀರ್ಮಾನಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು, ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡಕೂಡದೆಂದು ತೀರ್ಮಾನಿಸಿದರೆ, ಅಂಥ ನಿರ್ಣಯಕ್ಕೆ ಕಾರಣಗಳನ್ನು ಕೊಟ್ಟು ಒಂದು ಸಂಕ್ಷಿಪ್ತ ಲಿಖಿತ ಹೇಳಿಕೆಯನ್ನು ದಾಖಲಿಸತಕ್ಕದ್ದು.

(3) (2)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಕೇಂದ್ರ ಸರ್ಕಾರವು ತೀರ್ಮಾನಿಸಿದರೆ, 21ನೇ ಪ್ರಕರಣದ ಅನುಸಾರವಾಗಿ ಅದರ ಮೊತ್ತವನ್ನು ನಿರ್ಧರಿಸತಕ್ಕದ್ದು. ಆದರೆ, ಸಂದಾಯ ಮಾಡಬೇಕಾದ ನಷ್ಟ ಪರಿಹಾರವನ್ನು ಲೆಕ್ಕ ಹಾಕುವಾಗ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪದಾರ್ಥಗಳಲ್ಲಿ ಒಳಗೊಂಡಿರುವ ಯಾವುದೇ ಯುರೇನಿಯಂನ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(4) (1)ನೇ ಉಪ–ಪ್ರಕರಣದ (ಬಿ) ಖಂಡದ ಮೇರೆಗೆ, ಯಾವುದೇ ಗಣಿ ಕಾರ್ಯಾಚರಣೆಯನ್ನು ಅಥವಾ ಯಾವುದೇ ಪದಾರ್ಥದ ಸಂಸ್ಕರಣೆ ಅಥವಾ ಸಾಂದ್ರೀಕರಣ ಪ್ರಕ್ರಿಯೆಯನ್ನು ನಿಷೇಧಿಸಿದ್ದರೆ, ಕೇಂದ್ರ ಸರ್ಕಾರವು, ಗಣಿ ಕಾರ್ಯಾಚರಣೆ ನಡೆಸುತ್ತಿರುವ ಅಥವಾ ಸಂಸ್ಕರಿಸುತ್ತಿರುವ ಅಥವಾ ಸಾಂದ್ರೀಕರಿಸುತ್ತಿರುವ ಪ್ರಕ್ರಿಯೆಯನ್ನು ಬಳಸುವ ವ್ಯಕ್ತಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಪರಿಹಾರದ ಮೊತ್ತವನ್ನು 21ನೇ ಪ್ರಕರಣದ ಅನುಸಾರವಾಗಿ ನಿರ್ಧರಿಸತಕ್ಕದ್ದು. ಆದರೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರವನ್ನು ಲೆಕ್ಕ ಹಾಕುವಾಗ ಆ ಪದಾರ್ಥದಲ್ಲಿ ಒಳಗೊಂಡಿರುವ ಯಾವುದೇ ಯುರೇನಿಯಂನ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**6. ಯುರೇನಿಯಂನ್ನು ವಿಲೇವಾರಿ ಮಾಡುವುದು.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ ಪ್ರಮಾಣಕ್ಕಿಂತ ಅಧಿಕವಾಗಿ, ತಮ್ಮ ಸ್ವಾಭಾವಿಕ ಸ್ಥಿತಿಯಲ್ಲಿ ಯುರೇನಿಯಂನ್ನು ಒಳಗೊಂಡಂಥ ಯಾವುವೇ ಖನಿಜಗಳು, ಸಾಂದ್ರೀಕೃತಗಳು ಮತ್ತು ಇತರ ಸಾಮಗ್ರಿಗಳನ್ನು ಕೇಂದ್ರ ಸರ್ಕಾರದ ಲಿಖಿತ ಪೂರ್ವಾನುಮತಿ ಇದ್ದ ಹೊರತು ಮತ್ತು ಅದು ವಿಧಿಸಬಹುದಾದ ನಿಬಂಧನೆ ಮತ್ತು ಷರತ್ತುಗಳಿಗನುಸಾರವಾಗಿ ಹೊರತು, ವಿಲೇವಾರಿ ಮಾಡತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುವೇ ಖನಿಜ, ಸಾಂದ್ರೀಕೃತಗಳು ಅಥವಾ ಇತರ ವಸ್ತುಗಳನ್ನು ಉತ್ಪಾದಿಸಿರುವ ಯಾರೇ ವ್ಯಕ್ತಿಗೆ, ಕೇಂದ್ರ ಸರ್ಕಾರವು ಅದನ್ನು ಕಡ್ಡಾಯವಾಗಿ ಆರ್ಜಿಸಲು ಉದ್ದೇಶಿಸಿದೆಯೆಂದು ತಿಳಿಸಿ ನೋಟೀಸನ್ನು ಜಾರಿ ಮಾಡತಕ್ಕದ್ದು ಮತ್ತು ನೋಟೀಸನ್ನು ಜಾರಿ ಮಾಡಿದ ನಂತರ ಆ ಖನಿಜ, ಸಾಂದ್ರೀಕೃತಗಳು ಅಥವಾ ಇತರ ವಸ್ತುಗಳು ಕೇಂದ್ರ ಸರ್ಕಾರದ ಸ್ವತ್ತುಗಳಾಗಿರತಕ್ಕುವೆಂದು ಮತ್ತು ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಅಥವಾ ಅದು ನಿರ್ದೇಶಿಸಬಹುದಾದಂತೆ ಒಪ್ಪಿಸತಕ್ಕದ್ದೆಂದು ಆ ನೋಟೀಸಿನಲ್ಲಿ ತಿಳಿಸತಕ್ಕದ್ದು.

* * * * *

(3) (2)ನೇ ಉಪಪ್ರಕರಣದ ಮೇರೆಗಿನ ಆರ್ಜನೆಯ ಸಂಬಂಧದಲ್ಲಿ, 21ನೇ ಪ್ರಕರಣದನುಸಾರವಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ನಷ್ಟ ಪರಿಹಾರವನ್ನು ನಿರ್ಧರಿಸುವಲ್ಲಿ, ಅಂಥ ಖನಿಜ, ಸಾಂದ್ರೀಕೃತ ಅಥವಾ ಇತರ ವಸ್ತುವಿನ ಉತ್ಪಾದನಾ ವೆಚ್ಚದ ಕಡೆಗೆ ಮತ್ತು ಸಂಬಂಧಪಟ್ಟಂಥ ಇತರ ವಿಷಯಗಳ ಕಡೆಗೆ ಗಮನಹರಿಸತಕ್ಕದ್ದು, ಆದರೆ ಅದರಲ್ಲಿರುವ ಸ್ವಾಭಾವಿಕ ಸ್ಥಿತಿಯಲ್ಲಿನ ಯುರೇನಿಯಂನ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**7. ವಸ್ತುಗಳು, ಸ್ಥಾವರ ಅಥವಾ ಪ್ರಕ್ರಿಯೆಗಳನ್ನು ಕುರಿತ ಮಾಹಿತಿ ಪಡೆಯಲು ಅಧಿಕಾರಗಳು.–** ಕೇಂದ್ರ ಸರ್ಕಾರವು, ಯಾರೇ ವ್ಯಕ್ತಿಗೆ ಲಿಖಿತ ನೋಟೀಸನ್ನು ಜಾರಿ ಮಾಡಿ, ಈ ಮುಂದಿನವುಗಳಿಗೆ ಸಂಬಂಧಿಸಿದಂತೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವೇಳೆಯಲ್ಲಿ ಮತ್ತು ಅಂಥ ವಿವರಗಳನ್ನೊಳಗೊಂಡ ಅಂಥ ನಿಯತಕಾಲಿಕೆಗಳು ಮತ್ತು ಇತರ ವರದಿಗಳು ಅಥವಾ ಹೇಳಿಕೆಗಳನ್ನು ಮತ್ತು ಅಂಥ ನಕ್ಷೆಗಳು, ರೇಖಾಚಿತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಸಲ್ಲಿಸಲು ಅವನನ್ನು ಅಗತ್ಯಪಡಿಸಬಹುದು,–

(ಎ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ, ಅವನ ಸ್ವಾಧೀನದಲ್ಲಿ ಅಥವಾ ಅವನ ನಿಯಂತ್ರಣದಲ್ಲಿರುವ ಅಥವಾ ಯಾವುದೇ ನಿಯಮಿಸಿದ ಪದಾರ್ಥದ ಒಂದು ಮೂಲವಾಗಿರುತ್ತದೆ ಅಥವಾ ಆಗಬಲ್ಲದು ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ ಅಂಥ ಯಾವುದೇ ಜಮೀನು ಅಥವಾ ಗಣಿಯ ಸಂಬಂಧದಲ್ಲಿನ ವಿವರಪಟ್ಟಿಕೆಗಳೂ ಒಳಗೊಂಡಂತೆ ಅವನ ಮಾಲಿಕತ್ವದಲ್ಲಿರುವ ಅಥವಾ ಅವನ ಅಧಿಭೋಗದಲ್ಲಿರುವ ಯಾವುದೇ ಜಮೀನು ಅಥವಾ ಗಣಿಯಲ್ಲಿ ಅಥವಾ ಅದರ ಮೇಲೆ ಕಂಡು ಬಂದ ಯಾವುದೇ ನಿಯಮಿಸಿದ ಪದಾರ್ಥ;

(ಬಿ) ಹಾಗೆ ನಿರ್ದಿಷ್ಟಪಡಿಸಿದ ಖನಿಜಗಳ ಗಣಿಗಾರಿಕೆಗಾಗಿ ಅಥವಾ ಸಂಸ್ಕರಣಕ್ಕಾಗಿ ವಿನ್ಯಾಸಗೊಳಿಸಿದ ಅಥವಾ ಅಣುಶಕ್ತಿಯ ಉತ್ಪಾದನೆ ಅಥವಾ ಬಳಕೆಗಾಗಿ ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳ ಸಂಶೋಧನೆಗಾಗಿ ರೂಪಿಸಲಾದ ತನ್ನ ವಶದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಸ್ಥಾವರ;

(ಸಿ) ಹಾಗೆ ನಿರ್ದಿಷ್ಟಪಡಿಸಿದ ಖನಿಜಗಳ ಶೋಧನೆ ಅಥವಾ ಗಣಿಗಾರಿಕೆಗೆ ಸಂಬಂಧಪಟ್ಟಂತೆ ಅಥವಾ ಅಣುಶಕ್ತಿಯ ಉತ್ಪಾದನೆ ಅಥವಾ ಬಳಕೆ ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳ ಸಂಶೋಧನೆಗಾಗಿ ಅವನು ಮಾಡಿಕೊಂಡಿರುವ ಯಾವುದೇ ಕರಾರು ಅಥವಾ ಆ ಮೂಲಕ ಅಥವಾ ಅವನಿಗೆ ಮಂಜೂರು ಮಾಡಲಾದ ಯಾವುದೇ ಲೈಸೆನ್ಸು;

(ಡಿ) ಹಾಗೆ ನಿರ್ದಿಷ್ಟಪಡಿಸಲಾದ ವಸ್ತುಗಳ ಶೋಧನೆ ಅಥವಾ ಗಣಗಾರಿಕೆಗೆ ಅಥವಾ ಅಣುಶಕ್ತಿಯ ಉತ್ಪಾದನೆ ಅಥವಾ ಬಳಕೆಯ ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳ ಸಂಶೋಧನೆಯ ಸಂಬಂಧದಲ್ಲಿ, ಅವನು ಅಥವಾ ಆತನ ಪರವಾಗಿ ಅಥವಾ ಆತನ ನಿರ್ದೇಶನಗಳ ಮೇರೆಗೆ ನಿರ್ವಹಿಸಿದ ಯಾವುದೇ ಕೆಲಸದ ಬಗ್ಗೆ ಅವನ ಸ್ವಾಧೀನದಲ್ಲಿರುವ ಯಾವುದೇ ಇತರ ಮಾಹಿತಿ.

**8. ಪ್ರವೇಶ ಮತ್ತು ಪರಿಶೀಲನೆಯ ಅಧಿಕಾರ.–** (1) ಕೇಂದ್ರ ಸರ್ಕಾರದಿಂದ ಅಧಿಕೃತನಾದ ಯಾರೇ ವ್ಯಕ್ತಿಯು, ಹಾಗೆ ಅಗತ್ಯಪಡಿಸಿದರೆ, ತನ್ನ ಅಧಿಕಾರದ ಬಗ್ಗೆ ಯುಕ್ತವಾಗಿ ಅಧಿಪ್ರಮಾಣಿತವಾದ ಒಂದು ದಸ್ತಾವೇಜನ್ನು ತೋರಿಸಿ,–

(ಎ) ಯಾವ ನಿಯಮಿಸಿದ ಪದಾರ್ಥಗಳು ಅಥವಾ ಪದಾರ್ಥಗಳಿಂದ ನಿಯಮಿಸಿದ ಪದಾರ್ಥವನ್ನು ಪಡೆಯಬಹುದೋ ಅಥವಾ ಉತ್ಪಾದಿಸಬಹುದೋ ಆ ಯಾವುದೇ ನಿಯಮಿಸಿದ ಪದಾರ್ಥಗಳು ಅಥವಾ ಪದಾರ್ಥಗಳ ಉತ್ಪಾದನೆ ಮತ್ತು ಸಂಸ್ಕರಣದ ಉದ್ದೇಶಕ್ಕಾಗಿ ಅಥವಾ ಅದರ ಸಂಬಂಧದಲ್ಲಿ ಅಥವಾ ಅಣುಶಕ್ತಿಯ ಉತ್ಪಾದನೆ, ಅಭಿವೃದ್ಧಿ ಅಥವಾ ಬಳಕೆಯ ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಂಶೋಧನೆಯ ಸಂಬಂಧದಲ್ಲಿ ಕೆಲಸವು ನಡೆಯುತ್ತಿರುವುದಾಗಿ ಅವನು ನಂಬಲು ಕಾರಣವಿರುವಲ್ಲಿ, ಅಥವಾ

(ಬಿ) 7ನೇ ಪ್ರಕರಣದ (ಬಿ) ಖಂಡದಲ್ಲಿ ನಮೂದಿಸಿದಂಥ ಯಾವುದೇ ಸ್ಥಾವರವು ಇರುವಲ್ಲಿ

– ಯಾವುದೇ ಗಣಿ, ಆವರಣ ಅಥವಾ ಜಮೀನನ್ನು ಪ್ರವೇಶಿಸಬಹುದು ಮತ್ತು ಗಣಿ, ಆವರಣಗಳು ಅಥವಾ ಜಮೀನು ಮತ್ತು ಅದರೊಳಗಿರುವ ಯಾವುವೇ ವಸ್ತುಗಳನ್ನು ಪರಿಶೀಲಿಸಬಹುದು.

(2) ಪರಿಶೀಲನೆ ನಡೆಸುತ್ತಿರುವ ವ್ಯಕ್ತಿಯು ಗಣಿಯಲ್ಲಿ, ಆವರಣದಲ್ಲಿ ಅಥವಾ ಜಮೀನಿನಲ್ಲಿ ಕಂಡುಬಂದ ಯಾವುದೇ ರೇಖಾಚಿತ್ರ, ನಕ್ಷೆ ಅಥವಾ ಇತರ ದಸ್ತಾವೇಜಿನಿಂದ ಪ್ರತಿಗಳನ್ನು ಅಥವಾ ಅದರ ಉದ್ಧೃತಗಳನ್ನು ತೆಗೆದುಕೊಳ್ಳಬಹುದು ಮತ್ತು ಅಂಥ ಪ್ರತಿಗಳನ್ನು ಅಥವಾ ಉದ್ಧೃತಗಳನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಯುಕ್ತವಾಗಿ ಸಹಿ ಮಾಡಿದ ರಸೀದಿಯನ್ನು ಕೊಟ್ಟ ನಂತರ, ಅಂಥ ಯಾವುದೇ ರೇಖಾಚಿತ್ರ, ನಕ್ಷೆ ಅಥವಾ ಇತರ ದಸ್ತಾವೇಜನ್ನು ತೆಗೆದುಕೊಂಡು ಹೋಗಬಹುದು ಮತ್ತು ಏಳು ದಿವಸಗಳಿಗೆ ಮೀರದ ಅವಧಿಯವರೆಗೆ ಅವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಬಹುದು.

**9. ಖನಿಜಗಳ ಶೋಧನೆಗಾಗಿ ಕೆಲಸ ಮಾಡಲು ಅಧಿಕಾರ.**– (1) ಕೇಂದ್ರ ಸರ್ಕಾರವು, ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವುದೇ ಭೂಮಿಯ ಅಡಿಯ ಅಥವಾ ಮೇಲ್ಭಾಗದಿಂದ ಪಡೆದ ಸ್ವಾಭಾವಿಕ ಸ್ಥಿತಿಯಲ್ಲಿಯೇ ಆಗಲಿ ಅಥವಾ ತ್ಯಾಜ್ಯ ವಸ್ತುಗಳ ಶೇಖರಣೆಯ ಸ್ಥಿತಿಯಲ್ಲೇ ಆಗಲಿ ಯಾವ ಪದಾರ್ಥಗಳಿಂದ ತನ್ನ ಅಭಿಪ್ರಾಯದಲ್ಲಿ ಯಾವುದೇ ನಿಯಮಿಸಿದ ಪದಾರ್ಥವನ್ನು ಪಡೆಯಬಹುದಾಗಿದೆಯೋ ಆ ಯಾವುದೇ ಪದಾರ್ಥವು ಇದೆಯೇ, ಇದ್ದರೆ ಅಂಥ ಪದಾರ್ಥವು ಎಷ್ಟು ವ್ಯಾಪ್ತಿಯವರೆಗೆ ಆ ಭೂಮಿಯಲ್ಲಿ ಅಥವಾ ಅದರ ಮೇಲೆ ಇದೆ ಎಂಬುದನ್ನು ಶೋಧನೆ ಮಾಡುವ ಉದ್ದೇಶಕ್ಕಾಗಿ ತಾನು ಅವಶ್ಯವೆಂದು ಪರಿಗಣಿಸುವಂಥ ಆ ಭೂಮಿಯ ಮೇಲ್ಭಾಗದ ಮೇಲೆ ಅಥವಾ ಕೆಳಗೆ ಅಂಥ ಕೆಲಸವನ್ನು ಮಾಡಬಹುದು.

(2) ಯಾವುದೇ ಭೂಮಿಯ ಸಂಬಂಧದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಯಾವುವೇ ಅಧಿಕಾರಗಳನ್ನು ಚಲಾಯಿಸುವ ಮೊದಲು, ಕೇಂದ್ರ ಸರ್ಕಾರವು, ಭೂಮಿಯ ಪ್ರತಿಯೊಬ್ಬ ಮಾಲೀಕನಿಗೆ, ಗೇಣಿದಾರನಿಗೆ ಮತ್ತು ಅಧಿಭೋಗದಾರನಿಗೆ, ಮಾಡಲು ಉದ್ದೇಶಿಸಲಾಗಿರುವ ಕೆಲಸದ ಸ್ವರೂಪವನ್ನು ಮತ್ತು ಬಾಧಿತ ಭೂಮಿಯ ವ್ಯಾಪ್ತಿಯನ್ನು ಮತ್ತು ಇಪ್ಪತ್ತೆಂಟು ದಿವಸಗಳಿಗಿಂತ ಕಡಿಮೆಯಲ್ಲದ ಅವಧಿಯೊಳಗಾಗಿ ಅದಕ್ಕೆ ಯಾವ ರೀತಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬೇಕೆಂಬುದನ್ನು ನಿರ್ದಿಷ್ಟಪಡಿಸಿ, ಒಂದು ನೋಟೀಸನ್ನು ಜಾರಿ ಮಾಡತಕ್ಕದ್ದು ಮತ್ತು ನೋಟೀಸಿನ ಅನುಸಾರವಾಗಿಯಲ್ಲದೆ ಅಥವಾ ಆಕ್ಷೇಪಣೆಗಳನ್ನು ಸಲ್ಲಿಸಲು ಅದರಲ್ಲಿ ನಿರ್ದಿಷ್ಟಪಡಿಸಿದ ಸಮಯವು ಮುಗಿಯುವ ಮೊದಲು, ಅಂಥ ಯಾವುವೇ ಅಧಿಕಾರಗಳನ್ನು ಚಲಾಯಿಸತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, ಆಕ್ಷೇಪಣೆ ಸಲ್ಲಿಸುವ ವ್ಯಕ್ತಿಗೆ, ಕೇಂದ್ರ ಸರ್ಕಾರದಿಂದ, ಆ ಉದ್ದೇಶಕ್ಕಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯ ಮುಂದೆ ಹಾಜರಾಗಲು ಮತ್ತು ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ನಂತರ ಮತ್ತು ಅಂಥ ಯಾವುದೇ ಆಕ್ಷೇಪಣೆಯನ್ನು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯ ವರದಿಯನ್ನು ಪರಿಶೀಲಿಸಿದ ನಂತರ, ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಮಾಡಬಹುದು. ಆದರೆ ಅದು ಬಾಧಿತ ಭೂಮಿಯ ವ್ಯಾಪ್ತಿಯನ್ನು ಹೆಚ್ಚಿಸುವ ಹಾಗೆ ಇರತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗಿನ ಅಧಿಕಾರಗಳ ಚಲಾವಣೆಯ ಪರಿಣಾಮವಾಗಿ ಯಾವುದೇ ಭೂಮಿಯ ಅಥವಾ ಅಲ್ಲಿರುವ ಸ್ವತ್ತಿನ ಮೌಲ್ಯದಲ್ಲಿ ಉಂಟಾದ ಯಾವುದೇ ಇಳಿಕೆಗೆ ಸಂಬಂಧಿಸಿದಂತೆ ನಷ್ಟ ಪರಿಹಾರವನ್ನು 21ನೇ ಪ್ರಕರಣದ ಅನುಸಾರವಾಗಿ ನಿರ್ಧರಿಸತಕ್ಕದ್ದು ಮತ್ತು ಸಂದಾಯ ಮಾಡತಕ್ಕದ್ದು.

**10. ಖನಿಜಗಳ ಕಾರ್ಯಾಚರಣೆಗಾಗಿ ಹಕ್ಕುಗಳ ಕಡ್ಡಾಯ ಆರ್ಜನೆ.**– (1) ಯಾವ ಖನಿಜಗಳಿಂದ ನಿಯಮಿಸಿದ ಪದಾರ್ಥಗಳನ್ನು ಪಡೆಯಬಹುದೋ ಆ ಯಾವುವೇ ಖನಿಜಗಳು ಭೂಮಿಯಲ್ಲಿ ಅಥವಾ ಭೂಮಿಯ ಮೇಲೆ ಸ್ವಾಭಾವಿಕ ಸ್ಥಿತಿಯಲ್ಲಾಗಲೀ ಅಥವಾ ಭೂಮಿಯೊಳಗಿಂದ ಅಥವಾ ಭೂ ಮೇಲ್ಭಾಗದಿಂದ ಪಡೆದ ತ್ಯಾಜ್ಯವಸ್ತುಗಳ ಶೇಖರಣೆಯ ರೂಪದಲ್ಲಾಗಲೀ ಇವೆಯೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಆದೇಶದ ಮೂಲಕ, ಆ ಆದೇಶವು ಜಾರಿಯಲ್ಲಿರುವವರೆಗೆ, ಆ ಖನಿಜಗಳಲ್ಲಿ ಅಥವಾ ಯಾವ ಖನಿಜಗಳಲ್ಲಿ ಕಾರ್ಯಾಚರಣೆ ನಡೆಸುವುದು ಅವಶ್ಯವೆಂದು ಕೇಂದ್ರ ಸರ್ಕಾರಕ್ಕೆ ಕಂಡುಬರುವುದೋ ಆ ಖನಿಜಗಳಲ್ಲಿ ಕಾರ್ಯಾಚರಣೆ ನಡೆಸುವ ಅನನ್ಯ ಹಕ್ಕನ್ನು ಕೇಂದ್ರ ಸರ್ಕಾರದಲ್ಲಿ ಕಡ್ಡಾಯವಾಗಿ ನಿಹಿತಗೊಳಿಸಲು ಉಪಬಂಧಿಸಬಹುದು ಮತ್ತು ಆ ಆದೇಶದ ಮೂಲಕ ಅಥವಾ ತರುವಾಯದ ಆದೇಶದ ಮೂಲಕ ಕೆಳಕಂಡವುಗಳೂ ಒಳಗೊಂಡಂತೆ (ಪೂರ್ವೋಕ್ತ ಉಪಬಂಧಗಳ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ) ಖನಿಜಗಳಲ್ಲಿ ಕಾರ್ಯಾಚರಣೆ ನಡೆಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರಕ್ಕೆ ಅವಶ್ಯವೆಂದು ಕಂಡುಬರುವಂಥ ಅನುಗತ ಹಕ್ಕುಗಳನ್ನು ಕೇಂದ್ರ ಸರ್ಕಾರದಲ್ಲಿ ಕಡ್ಡಾಯವಾಗಿ ನಿಹಿತಗೊಳಿಸಲು ಸಹಾ ಉಪಬಂಧಿಸಬಹುದು,–

(ಎ) ಬೆಂಬಲವನ್ನು ಹಿಂತೆಗೆದುಕೊಳ್ಳುವ ಹಕ್ಕುಗಳು;

(ಬಿ) ಹಿಂದೆ ಹೇಳಿದ ಖನಿಜಗಳಿಗೆ ಪ್ರವೇಶಾವಕಾಶದ ಅಥವಾ ಅವುಗಳನ್ನು ಸಾಗಿಸುವ ಅಥವಾ ಕಾರ್ಯಾಚರಣೆಗಾಗಿ ಗಾಳಿ ಬೆಳಕಿನ ವ್ಯವಸ್ಥೆ ಅಥವಾ ಚರಂಡಿ ವ್ಯವಸ್ಥೆಯ ಉದ್ದೇಶಕ್ಕಾಗಿ ಅವಶ್ಯವಾದ ಹಕ್ಕುಗಳು;

(ಸಿ) ಹಿಂದೆ ಹೇಳಿದ, ಖನಿಜಗಳ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಅವಶ್ಯವಾಗಿರುವ ಯಾವುವೇ ಕಟ್ಟಡಗಳನ್ನು ನಿರ್ಮಿಸುವ ಮತ್ತು ಅವಶ್ಯವಾದ ಯಾವುದೇ ಸ್ಥಾವರವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಯಾವುದೇ ಭೂಮಿಯ ಮೇಲ್ಮೈಯನ್ನು ಬಳಸಿಕೊಳ್ಳುವ ಮತ್ತು ವಶಕ್ಕೆ ತೆಗೆದುಕೊಳ್ಳುವ ಹಕ್ಕುಗಳು;

(ಡಿ) ಹಿಂದೆ ಹೇಳಿದಂತೆ ಖನಿಜಗಳನ್ನು ತೆಗೆಯುವ ಕಾರ್ಯದ ಉದ್ದೇಶಕ್ಕಾಗಿ ಈಗಿರುವ ಗಣಿಯ ಅಥವಾ ಕಲ್ಲು ಗಣಿಯ ಸಂಬಂಧದಲ್ಲಿನ ಭಾಗವಾಗಿರುವ ಅಥವಾ ಬಳಸಿರುವ ಯಾವುದೇ ಭೂಮಿಯನ್ನು ಬಳಸುವ ಮತ್ತು ವಶಕ್ಕೆ ತೆಗೆದುಕೊಳ್ಳುವ ಮತ್ತು ಅಂಥ ಯಾವುದೇ ಗಣಿಯ ಅಥವಾ ಕಲ್ಲು ಗಣಿಯ ಸಂಬಂಧದಲ್ಲಿ ಬಳಸಲಾದ ಯಾವುದೇ ಸ್ಥಾವರವನ್ನು ಬಳಸುವ ಅಥವಾ ವಶಕ್ಕೆ ತೆಗೆದುಕೊಳ್ಳುವ ಹಕ್ಕುಗಳು; ಮತ್ತು

(ಇ) ಹಿಂದೆ ಹೇಳಿದ ಖನಿಜಗಳ ಕಾರ್ಯಾಚರಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ನೀರಿನ ಸರಬರಾಜು ಪಡೆಯುವ ಅಥವಾ ಅಂತಹ ಖನಿಜಗಳ ಕಾರ್ಯಾಚರಣೆಯ ಪರಿಣಾಮವಾಗಿ ಪಡೆದ ನೀರನ್ನು ಅಥವಾ ಇತರ ದ್ರವರೂಪದ ವಸ್ತುವನ್ನು ವಿಲೇವಾರಿ ಮಾಡುವ ಹಕ್ಕುಗಳು

– ಒಳಗೊಳ್ಳುತ್ತವೆ.

(2) ಈ ಪ್ರಕರಣದ ಮೇರೆಗೆ ಮಾಡಲು ಉದ್ದೇಶಿಸಲಾದ ಯಾವುದೇ ಆದೇಶದ ನೋಟೀಸನ್ನು ಕೇಂದ್ರ ಸರ್ಕಾರವು,–

(ಎ) ಈ ಆದೇಶವಿರದಿದ್ದರೆ ಸಂಬಂಧಪಟ್ಟ ಖನಿಜಗಳ ಕಾರ್ಯಾಚರಣೆಗೆ ಹಕ್ಕುಳ್ಳವರಾಗುವ ಎಲ್ಲ ವ್ಯಕ್ತಿಗಳಿಗೆ; ಮತ್ತು

(ಬಿ) ಆದೇಶದ ಮೇರೆಗೆ ಹಕ್ಕುಗಳನ್ನು ಆರ್ಜಿಸಲು ಉದ್ದೇಶಿಸಿರುವ ಯಾವುದೇ ಜಮೀನಿನ ಪ್ರತಿಯೊಬ್ಬ ಮಾಲೀಕ, ಗೇಣಿದಾರ ಮತ್ತು ಅಧಿಭೋಗದಾರನಿಗೆ (ಒಂದು ತಿಂಗಳು ಅಥವಾ ಒಂದು ತಿಂಗಳಿಗಿಂತಲೂ ಕಡಿಮೆ ಅವಧಿಯ ಗೇಣಿದಾರರ ಹೊರತಾಗಿ)

– ಜಾರಿ ಮಾಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಆರ್ಜಿಸಲಾದ ಯಾವುದೇ ಹಕ್ಕಿನ ಸಂಬಂಧದಲ್ಲಿ ಪರಿಹಾರವನ್ನು 21ನೇ ಪ್ರಕರಣಕ್ಕೆ ಅನುಸಾರವಾಗಿ ಸಂದಾಯ ಮಾಡತಕ್ಕದ್ದು. ಆದರೆ, ಸಂದಾಯ ಮಾಡಬೇಕಾದ ಪರಿಹಾರವನ್ನು ಲೆಕ್ಕ ಹಾಕುವಾಗ, ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಖನಿಜಗಳಿಂದ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಯುರೇನಿಯಂನ್ನು ಅಥವಾ ಯುರೇನಿಯಂನ ಯಾವುದೇ ಸಾಂದ್ರೀಕೃತ ರೂಪವನ್ನು ಅಥವಾ ಉತ್ಪನ್ನವನ್ನು ಪಡೆಯಬಹುದೋ ಆ ಆದೇಶದಿಂದ ಬಾಧಿತವಾದ ಭೂಮಿಯಲ್ಲಿ ಅಥವಾ ಅದರ ಮೇಲೆ ಇರುವ ಯಾವುವೇ ಖನಿಜಗಳ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**11. ನಿಯಮಿಸಿದ ಪದಾರ್ಥಗಳ, ಖನಿಜಗಳ ಮತ್ತು ಸ್ಥಾವರಗಳ ಕಡ್ಡಾಯ ಆರ್ಜನೆ.**– (1) ಈ ಅಧಿನಿಯಮದ ಇತರ ಯಾವುವೇ ಉಪಬಂಧಗಳಲ್ಲಿ ಉಪಬಂಧಿಸಿರುವುದನ್ನುಳಿದು, ಕೇಂದ್ರ ಸರ್ಕಾರವು, ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ,–

(ಎ) ಯಾವುದೇ ನಿಯಮಿಸಿದ ಪದಾರ್ಥವನ್ನು;

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಯಾವ ಖನಿಜಗಳಿಂದ ಯಾವುವೇ ಪದಾರ್ಥಗಳನ್ನು ಪಡೆಯಬಹುದೋ ಆ ಯಾವುವೇ ಖನಿಜಗಳನ್ನು;

(ಸಿ) ಯಾವುದೇ ನಿಯಮಿಸಿದ ಸಾಧನ ಸಾಮಗ್ರಿಯನ್ನು;

(ಡಿ) (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುವೇ ಖನಿಜಗಳ ಗಣಿಗಾರಿಕೆಗೆ ಅಥವಾ ಖನಿಜಗಳ ಅಥವಾ ಅವುಗಳಿಂದ ಪಡೆದ ಪದಾರ್ಥಗಳ ಸಂಸ್ಕರಣೆಗೆ ಅಥವಾ ಯಾವುದೇ ಗೊತ್ತುಪಡಿಸಿದ ಪದಾರ್ಥದ ಅಥವಾ ಅಣುವಿಕಿರಣಕಾರಿ ಪದಾರ್ಥದ ಉತ್ಪಾದನೆಗೆ ಅಥವಾ ಬಳಕೆಗೆ ಅಥವಾ ಅಣುಶಕ್ತಿಯ ಉತ್ಪಾದನೆ, ಬಳಕೆ ಅಥವಾ ವಿಲೆಯ ಸಂಬಂಧದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳ ಸಂಶೋಧನೆಗಾಗಿ ಅಗತ್ಯವಾಗುವ ಅಥವಾ ಅಗತ್ಯವಾಗಬಹುದಾದ ವಸ್ತುಗಳ ಉತ್ಪಾದನೆ, ಬಳಕೆ ಅಥವಾ ವಿಲೆಗಾಗಿ ರೂಪಿಸಲಾದ ಅಥವಾ ಅಳವಡಿಸಲಾದ ಯಾವುದೇ ಸ್ಥಾವರವನ್ನು

– ಕಡ್ಡಾಯವಾಗಿ ಆರ್ಜಿಸಬಹುದು.

(2) ಕೇಂದ್ರ ಸರ್ಕಾರವು (1)ನೇ ಉಪ-ಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಸ್ಥಾವರವನ್ನು ಆರ್ಜಿಸುವಲ್ಲಿ, ಅಂಥ ಸ್ಥಾವರವನ್ನು ನಿರ್ವಹಿಸಲು ಯಾವುವೇ ಕಟ್ಟಡಗಳು, ರೈಲ್ವೆ ಕಂಬಿದಾರಿಗಳನ್ನು, ಟ್ರಾಮ್‌ವೇ ಲೈನುಗಳನ್ನು ಅಥವಾ ಏರಿಯಲ್ ರೋಪ್‌ವೇಯನ್ನು ಆರ್ಜಿಸಲು ಹಕ್ಕನ್ನು ಸಹ ಹೊಂದಿರತಕ್ಕದ್ದು.

(3) ಕೇಂದ್ರ ಸರ್ಕಾರವು (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಆರ್ಜಿಸಲು ಉದ್ದೇಶಿಸಿರುವಲ್ಲಿ, ಅದರ ಮಾಲೀಕನೆಂದು ಕಂಡುಬರುವ ವ್ಯಕ್ತಿಗೆ, ಆರ್ಜಿಸಲಾಗುವ ಸ್ವತ್ತನ್ನು ನಿರ್ದಿಷ್ಟಪಡಿಸಿ ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಕೇಂದ್ರ ಸರ್ಕಾರಕ್ಕೆ, ಅಂಥ ಸ್ವತ್ತಿನ ಮಾಲಿಕತ್ವದ ಕುರಿತಾಗಿ ಮತ್ತು ಅಂಥ ಸ್ವತ್ತಿನ ಮೇಲೆ, ಯಾವ ಒಪ್ಪಂದ ಅಥವಾ ಋಣಭಾರದ ಕಾರಣದಿಂದಾಗಿ ಇತರ ಯಾರೇ ವ್ಯಕ್ತಿಯು ಹಿತಾಸಕ್ತಿಯನ್ನು ಹೊಂದಿರುತ್ತಾನೋ ಅವುಗಳ ಬಗ್ಗೆ ಹಾಗೆ ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ಒಳಗೊಂಡ ಒಂದು ಲಿಖಿತ ಘೋಷಣೆಯನ್ನು ಮಾಡಬೇಕೆಂಬುದನ್ನು ಅಗತ್ಯಪಡಿಸುವ ಒಂದು ಲಿಖಿತ ನೋಟೀಸನ್ನು ಜಾರಿ ಮಾಡತಕ್ಕದ್ದು.

(4) (3)ನೇ ಉಪ-ಪ್ರಕರಣದ ಮೇರೆಗೆ ಒಂದು ನೋಟೀಸನ್ನು ಜಾರಿ ಮಾಡಿದ ನಂತರ, ಕೇಂದ್ರ ಸರ್ಕಾರದಿಂದ ಲಿಖಿತದಲ್ಲಿ ಪೂರ್ವಾನುಮೋದನೆ ಪಡೆಯದೆ ಯಾವ ಸ್ವತ್ತಿಗೆ ನೋಟೀಸು ಸಂಬಂಧಿಸಿದೆಯೋ ಆ ಯಾವುದೇ ಸ್ವತ್ತನ್ನು ವಿಲೇವಾರಿ ಮಾಡತಕ್ಕದ್ದಲ್ಲ.

(5) (3)ನೇ ಉಪ-ಪ್ರಕರಣದ ಅನುಸಾರ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಯಾವುದೇ ಲಿಖಿತ ಘೋಷಣೆಯ ಪರಿಣಾಮವಾಗಿ, (3)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯನ್ನು ಹೊರತುಪಡಿಸಿ ಯಾರೇ ವ್ಯಕ್ತಿಯು ನೋಟೀಸು ಸಂಬಂಧಪಟ್ಟಂಥ ಸ್ವತ್ತಿಗೆ ಮಾಲೀಕನಾಗಿದ್ದಾನೆ ಅಥವಾ ಅದರಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿದ್ದಾನೆ ಎಂಬುದಾಗಿ ಕೇಂದ್ರ ಸರ್ಕಾರಕ್ಕೆ ಕಂಡು ಬಂದರೆ, ಕೇಂದ್ರ ಸರ್ಕಾರವು, ಆ ಇತರ ವ್ಯಕ್ತಿಗೆ ನೋಟೀಸಿನ ಒಂದು ಪ್ರತಿಯನ್ನು ಜಾರಿ ಮಾಡತಕ್ಕದ್ದು.

(6) (3)ನೇ ಉಪ-ಪ್ರಕರಣದ ಮೇರೆಗೆ ಜಾರಿಗೊಳಿಸಲಾದ ನೋಟೀಸು, ನಿರ್ದಿಷ್ಟಪಡಿಸ ಬಹುದಾದಂಥ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಅದಕ್ಕೆ ಆಕ್ಷೇಪಣೆಯನ್ನು ಸಲ್ಲಿಸಬಹುದೆಂಬ ಬಗ್ಗೆ ವಿವರಣೆಯನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ಯಾವುದೇ ಆಕ್ಷೇಪಣೆಯನ್ನು ಯುಕ್ತವಾಗಿ ಮಾಡಲಾಗಿದ್ದರೆ ಮತ್ತು ಅದನ್ನು ಹಿಂತೆಗೆದುಕೊಂಡಿಲ್ಲದಿದ್ದರೆ, ಕೇಂದ್ರ ಸರ್ಕಾರವು ಆ ಉದ್ದೇಶಕ್ಕಾಗಿ ನೇಮಕ ಮಾಡಿದ ವ್ಯಕ್ತಿಯ ಮುಂದೆ ಹಾಜರಾಗಲು ಮತ್ತು ತನ್ನ ಅಹವಾಲನ್ನು ಹೇಳಿಕೊಳ್ಳಲು ಆಕ್ಷೇಪಣೆ ಸಲ್ಲಿಸಿದ ವ್ಯಕ್ತಿಗೆ ಕೇಂದ್ರ ಸರ್ಕಾರವು ಒಂದು ಅವಕಾಶವನ್ನು ನೀಡತಕ್ಕದ್ದು.

(7) ಅಂಥ ಯಾವುದೇ ಆಕ್ಷೇಪಣೆಯನ್ನು ಮತ್ತು (6)ನೇ ಉಪ-ಪ್ರಕರಣದ ಮೇರೆಗೆ ತಾನು ನೇಮಕ ಮಾಡಿದ ವ್ಯಕ್ತಿಯಿಂದ ಬಂದ ವರದಿಯನ್ನು ಪರಿಶೀಲಿಸಿದ ನಂತರ, ಕೇಂದ್ರ ಸರ್ಕಾರವು, (3)ನೇ ಉಪ

ಪ್ರಕರಣದ ಮೇರೆಗೆ ಯಾವ ವ್ಯಕ್ತಿಗಳಿಗೆ ನೋಟೀಸನ್ನು ಅಥವಾ ಅದರ ಪ್ರತಿಯನ್ನು ಜಾರಿಗೊಳಿಸಲಾಗಿತ್ತೋ ಆ ವ್ಯಕ್ತಿಗಳಿಗೆ ಅದು ಯಾವ ಸ್ವತ್ತಿಗೆ ಸಂಬಂಧಪಟ್ಟಿದೆಯೋ ಅದಕ್ಕೆ ಅಥವಾ ನಿರ್ದಿಷ್ಟಪಡಿಸಬಹುದಾದ ಸ್ವತ್ತಿನ ಅಂಥ ಭಾಗಕ್ಕೆ ಸಂಬಂಧಪಟ್ಟಂತೆ ಆರ್ಜನೆಯ ನೋಟೀಸನ್ನು ಹಿಂತೆಗೆದುಕೊಳ್ಳುವ ಅಥವಾ ಸದರಿ ನೋಟೀಸನ್ನು ಸ್ಥಿರೀಕರಿಸುವ ಮತ್ತೊಂದು ನೋಟೀಸನ್ನು ಬರವಣಿಗೆಯಲ್ಲಿ ಜಾರಿ ಮಾಡಬಹುದು.

(8) ಈ ಪ್ರಕರಣದ ಮೇರೆಗೆ ಯಾವ ಸ್ವತ್ತಿನ ಆರ್ಜನೆಯ ಸಂಬಂಧದಲ್ಲಿ ನೋಟೀಸನ್ನು ಜಾರಿಗೊಳಿಸಲಾಗಿದೆಯೋ ಆ ಯಾವುದೇ ಸ್ವತ್ತು,-

(ಎ) ನೋಟೀಸಿಗೆ ಯುಕ್ತವಾಗಿ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದಿದ್ದರೆ, ಅಂಥ ಆಕ್ಷೇಪಣೆಯನ್ನು ಸಲ್ಲಿಸುವುದಕ್ಕೆ ಇರುವ ಸಮಯವು ಮುಕ್ತಾಯವಾದಲ್ಲಿ ಕೇಂದ್ರ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು;

(ಬಿ) ಅಂಥ ಆಕ್ಷೇಪಣೆಯನ್ನು ಯುಕ್ತವಾಗಿ ಸಲ್ಲಿಸಿದರೆ ಮತ್ತು (7)ನೇ ಉಪ-ಪ್ರಕರಣದ ಮೇರೆಗೆ ಜಾರಿ ಮಾಡಿದ ನೋಟೀಸಿನ ಮೂಲಕ ಅಂಥ ಸ್ವತ್ತು ಇಡಿಯಾಗಿ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಆ ನೋಟೀಸು ಸ್ಥಿರೀಕರಣಗೊಂಡರೆ, ಕೊನೆಯಲ್ಲಿ ನಮೂದಿಸಿದ ನೋಟೀಸನ್ನು ಜಾರಿ ಮಾಡಿದ ನಂತರ ಅದಕ್ಕನುಸಾರವಾಗಿ ಕೇಂದ್ರ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು

– ಮತ್ತು ಉಭಯ ಸಂದರ್ಭಗಳಲ್ಲಿಯೂ ಅದು ಎಲ್ಲ ಋಣ ಭಾರಗಳಿಂದ ಮುಕ್ತವಾಗಿರತಕ್ಕದ್ದು.

(9) ಈ ಪ್ರಕರಣದ ಮೇರೆಗೆ ಆರ್ಜನೆಯ ಸಂಬಂಧದ ಪರಿಹಾರವನ್ನು 21ನೇ ಪ್ರಕರಣಕ್ಕೆ ಅನುಸಾರವಾಗಿ ಸಂದಾಯ ಮಾಡತಕ್ಕದ್ದು.

**11ಎ. ಸಂದೇಹಗಳ ನಿವಾರಣೆ.**– ಸಂದೇಹಗಳ ನಿವಾರಣೆಗಾಗಿ, 6ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಯಾವುದೇ ಖನಿಜ, ಸಾಂದ್ರೀಕೃತ ಪದಾರ್ಥದ ಅಥವಾ 11ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಪದಾರ್ಥದ, ಖನಿಜಗಳ, ಸಾಧನ ಸಾಮಗ್ರಿಯ ಅಥವಾ ಸ್ಥಾವರದ ಕಡ್ಡಾಯ ಆರ್ಜನೆಯನ್ನು ಯಾವುದೇ ಉದ್ದೇಶಕ್ಕಾಗಲಿ ಮಾರಾಟವೆಂದು ಪರಿಗಣಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

**12. ಗಣಿಯ ಕಡ್ಡಾಯ ಆರ್ಜನೆಯ ಸಂದರ್ಭದಲ್ಲಿ ಪರಿಹಾರ.**– ಯಾವುದೇ ನಿಯಮಿಸಿದ ಪದಾರ್ಥಗಳು ದೊರಕಬಹುದೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವ ಯಾವುದೇ ಗಣಿ ಅಥವಾ ಗಣಿಯ ಭಾಗವನ್ನು ಯಾವುದೇ ಕಾನೂನಿಗನುಸಾರ, ಕೇಂದ್ರ ಸರ್ಕಾರವು ಆರ್ಜಿಸಿಕೊಂಡಾಗ, ಅಂಥ ಆರ್ಜನೆಯ ಸಂಬಂಧದಲ್ಲಿ 21ನೇ ಪ್ರಕರಣಕ್ಕೆ ಅನುಸಾರವಾಗಿ ಪರಿಹಾರವನ್ನು ಸಂದಾಯ ಮಾಡತಕ್ಕದ್ದು:

ಪರಂತು, ಅಂಥ ಪರಿಹಾರದ ಮೊತ್ತವನ್ನು ನಿರ್ಧರಿಸುವಾಗ, ಅಂಥ ಗಣಿ ಅಥವಾ ಗಣಿಯ ಭಾಗದಿಂದ ಪಡೆಯಬಹುದಾದ ಯುರೇನಿಯಂನ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**13. ಕೆಲವು ಕರಾರುಗಳ ನವೀಕರಣ.**– (1) ಯಾವ ಶೋಧನೆ ಅಥವಾ ಗಣಿಗಾರಿಕೆಯಿಂದ ನಿಯಮಿಸಿದ ಯಾವುವೇ ಪದಾರ್ಥಗಳನ್ನು ಪಡೆಯಬಹುದೋ ಆ ಯಾವುವೇ ಪದಾರ್ಥದ ಶೋಧನೆಗೆ ಅಥವಾ ಗಣಿಗಾರಿಕೆಗೆ ಸಂಬಂಧಿಸಿದ ಅಥವಾ ಅಣುಶಕ್ತಿಯ ಉತ್ಪಾದನೆಗೆ ಅಥವಾ ಬಳಕೆಗೆ ಸಂಬಂಧಿಸಿದ ಅಥವಾ ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಸಂಶೋಧನೆ ನಡೆಸುವುಕ್ಕೆ ಸಂಬಂಧಿಸಿದ, ವೈಯಕ್ತಿಕ ಸೇವೆಗಳನ್ನು ಸಲ್ಲಿಸುವುದಕ್ಕಾಗಿನ ಕರಾರಾಗಿರದ ಒಂದು ಕರಾರಿನ ಪಕ್ಷಕಾರರಿಗೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ದಿನಾಂಕದಂದು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ (ಇಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ಪಕ್ಷಕಾರನೆಂದು ಉಲ್ಲೇಖಿಸಲಾಗಿದೆ) ಕರಾರಿನ ಯಾರೇ ಪಕ್ಷಕಾರರ ಹಕ್ಕುಗಳನ್ನು ಮತ್ತು ಬಾಧ್ಯತೆಗಳನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲಾಗುವುದೆಂದು ತಿಳಿಸುವ ಒಂದು ಲಿಖಿತ ನೋಟೀಸನ್ನು ಪಕ್ಷಕಾರರಿಗೆ ಕೇಂದ್ರ ಸರ್ಕಾರವು ಜಾರಿ ಮಾಡಬಹುದು ಮತ್ತು ಅನಂತರ, ಈ ಪ್ರಕರಣದ ಈ ಮುಂದಿನ ಉಪಬಂಧಗಳ ಮೇರೆಗೆ ನೋಟೀಸಿನ ಯಾವುದೇ ಹಿಂತೆಗೆದುಕೊಳ್ಳುವಿಕೆಗೆ ಒಳಪಟ್ಟು, ಚಲಾಯಿಸಬಹುದಾದ ಯಾವುವೇ ಹಕ್ಕುಗಳಿಗೆ, ಅಥವಾ ಉಂಟಾದ ಬಾಧ್ಯತೆಗಳಿಗೆ ಸಂಬಂಧಿಸಿದಂತೆ, ಕರಾರು, ಸದರಿ ದಿನಾಂಕದಂದು ಅಥವಾ ನಂತರ, ನಿರ್ದಿಷ್ಟಪಡಿಸಿದ ಪಕ್ಷಕಾರನ ಬದಲಾಗಿ ಕೇಂದ್ರ ಸರ್ಕಾರವು ಆ ಕರಾರಿಗೆ ಪಕ್ಷಕಾರನಾಗಿದ್ದರೆ

ಹೇಗೋ ಹಾಗೆ ಮತ್ತು ಕರಾರಿನಲ್ಲಿ ನಿರ್ದಿಷ್ಟಪಡಿಸಿದ ಪಕ್ಷಕಾರನಿಗೆ ಕರಾರಿನಲ್ಲಿ ಮಾಡಿದ ಯಾವುದೇ ಉಲ್ಲೇಖಕ್ಕೆ ಕೇಂದ್ರ ಸರ್ಕಾರಕ್ಕೆ ಉಲ್ಲೇಖವನ್ನು ಪ್ರತ್ಯಾಯೋಜಿಸಿದರೆ ಹೇಗೋ ಹಾಗೆ ಪರಿಣಾಮ ಹೊಂದತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ಜಾರಿಗೊಳಿಸಲಾದ ನೋಟೀಸಿನಲ್ಲಿ, ನಿರ್ದಿಷ್ಟಪಡಿಸ ಬಹುದಾದಂಥ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಅದಕ್ಕೆ ಆಕ್ಷೇಪಣೆಯನ್ನು ಸಲ್ಲಿಸಬಹುದೆಂಬ ಬಗ್ಗೆ ವಿವರಣೆಯು ಒಳಗೊಂಡಿರತಕ್ಕದ್ದು ಮತ್ತು ಯಾವುದೇ ಅಂಥ ಆಕ್ಷೇಪಣೆಯನ್ನು ಯುಕ್ತವಾಗಿ ಸಲ್ಲಿಸಿದ್ದು ಅದನ್ನು ಹಿಂತೆಗೆದುಕೊಳ್ಳದಿದ್ದರೆ, ಕೇಂದ್ರ ಸರ್ಕಾರವು, ಆಕ್ಷೇಪಣೆ ಸಲ್ಲಿಸುವ ವ್ಯಕ್ತಿಗೆ ಕೇಂದ್ರ ಸರ್ಕಾರವು ಆ ಉದ್ದೇಶಕ್ಕಾಗಿ ನೇಮಕ ಮಾಡಿದ ವ್ಯಕ್ತಿಯ ಮುಂದೆ ಹಾಜರಾಗಲು ಮತ್ತು ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕದ್ದು.

(3) ಅಂಥ ಯಾವುದೇ ಆಕ್ಷೇಪಣೆಯನ್ನು ಮತ್ತು (2)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿಯ ವರದಿಯನ್ನು ಪರಿಶೀಲಿಸಿದ ನಂತರ, ಕೇಂದ್ರ ಸರ್ಕಾರವು ತಾನು ಸೂಕ್ತ ಎಂದು ಭಾವಿಸುವಂಥ ಆದೇಶವನ್ನು ಮಾಡಬಹುದು.

(4) ಕರಾರಿನ ಪಕ್ಷಕಾರನ ಹಕ್ಕು ಮತ್ತು ಬಾಧ್ಯತೆಗಳನ್ನು ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲಾದಲ್ಲಿ, ಪಕ್ಷಕಾರನು ಅನುಭವಿಸಿದ ಯಾವುದೇ ನಷ್ಟದ ಸಂಬಂಧದಲ್ಲಿ, ಆತನ ಮತ್ತು ಕೇಂದ್ರ ಸರ್ಕಾರದ ನಡುವೆ ಒಪ್ಪಿಕೊಳ್ಳಬಹುದಾದಂತೆ ಮತ್ತು ಅಂಥ ಒಪ್ಪಂದವನ್ನು ಪಾಲಿಸಲು ತಪ್ಪಿದರೆ, ಮಧ್ಯಸ್ಥಿಕೆಯ ಮೂಲಕ ನಿರ್ಧರಿಸಬಹುದಾದಂತೆ ಪರಿಹಾರವನ್ನು ಆ ಪಕ್ಷಕಾರನಿಗೆ ಸಂದಾಯ ಮಾಡತಕ್ಕದ್ದು.

**14. ಅಣುಶಕ್ತಿಯ ಉತ್ಪಾದನೆ ಮತ್ತು ಬಳಕೆಯ ಮೇಲೆ ನಿಯಂತ್ರಣ.**– (1) ಕೇಂದ್ರ ಸಕಾರವು, ಈ ಸಂಬಂಧದಲ್ಲಿ ಮಾಡಬಹುದಾದಂಥ ನಿಯಮಗಳಿಗೊಳಪಟ್ಟು, ತಾನು ನೀಡಿರುವ ಲೈಸೆನ್ಸಿನ ಅಡಿಯಲ್ಲಿ ಹೊರತು ಆದೇಶದ ಮೂಲಕ,–

(i) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಯಾವುವೇ ನಿಯಮಿಸಿದ ಪದಾರ್ಥಗಳನ್ನು ಪಡೆಯಬಹುದಾದ ಗಣಿ ಅಥವಾ ಖನಿಜಗಳಾಗಿರುವ, ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಗಣಿ ಅಥವಾ ಖನಿಜಗಳ ಕಾರ್ಯಾಚರಣೆಯನ್ನು;

(ii) (ಎ) ಯಾವುವೇ ನಿಯಮಿಸಿದ ಪದಾರ್ಥಗಳನ್ನು; ಅಥವಾ

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ, ಯಾವ ಖನಿಜಗಳು ಅಥವಾ ಇತರ ಪದಾರ್ಥಗಳಿಂದ ಯಾವುವೇ ನಿಯಮಿಸಿದ ಪದಾರ್ಥಗಳನ್ನು ಪಡೆಯಬಹುದೋ ಆ ಯಾವುವೇ ಖನಿಜಗಳನ್ನು ಅಥವಾ ಇತರ ಪದಾರ್ಥಗಳನ್ನು; ಅಥವಾ

(ಸಿ) ಅಣುಶಕ್ತಿಯ ಉತ್ಪಾದನೆ, ಅಭಿವೃದ್ಧಿ ಮತ್ತು ಬಳಕೆಗಾಗಿ ಅಥವಾ ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಂಶೋಧನೆ ನಡೆಸುವುದಕ್ಕಾಗಿ ರೂಪಿಸಲಾದ ಅಥವಾ ಅಳವಡಿಸಲಾದ ಅಥವಾ ತಯಾರಿಸಲಾದ ಯಾವುದೇ ಸ್ಥಾವರವನ್ನು; ಅಥವಾ

(ಡಿ) ಯಾವುದೇ ಗೊತ್ತುಪಡಿಸಿದ ಸಾಧನ ಸಾಮಗ್ರಿಯನ್ನು

– ಆರ್ಜನೆ, ಉತ್ಪಾದನೆ, ಸ್ವಾಧೀನ, ಬಳಕೆ, ವಿಲೆ, ರಫ್ತು ಅಥವಾ ಆಮದು ಮಾಡಿಕೊಳ್ಳುವುದನ್ನು ನಿಷೇಧಿಸಬಹುದು.

(2) ಈ ಪ್ರಕರಣದಲ್ಲಿರುವುದು ಯಾವುದೂ, ಈ ಪ್ರಕರಣದ ಉದ್ದೇಶಕ್ಕಾಗಿ ಲೈಸೆನ್ಸನ್ನು ನಿರಾಕರಿಸುವ ಅಥವಾ ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸುವಂತಹ ಷರತ್ತುಗಳನ್ನು ಲೈಸೆನ್ಸಿನಲ್ಲಿ ಸೇರಿಸುವ ಅಥವಾ ಲೈಸೆನ್ಸನ್ನು ರದ್ದುಗೊಳಿಸುವ ಕೇಂದ್ರ ಸರ್ಕಾರದ ಅಧಿಕಾರಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಕೇಂದ್ರ ಸರ್ಕಾರವು ಹಿಂದೆ ಹೇಳಿದಂತೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಹುದು.

(3) ಈ ಪ್ರಕರಣದಲ್ಲಿ ಉಲ್ಲೇಖಿಸಿದ ನಿಯಮಗಳು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ,–

(ಎ) ಈ ಪ್ರಕರಣದ ಉದ್ದೇಶಕ್ಕಾಗಿ, ಲೈಸೆನ್ಸನ್ನು ನೀಡಲಾದ ವ್ಯಕ್ತಿಯ ಸ್ವಾಧೀನದಲ್ಲಿರುವ ಅಥವಾ ಆ ವ್ಯಕ್ತಿಗೆ ಲಭ್ಯವಾಗಿಸಿರುವ ಮಾಹಿತಿಯನ್ನು ಎಷ್ಟರಮಟ್ಟಿಗೆ ನಿರ್ಬಂಧಿತ ಮಾಹಿತಿಯಾಗಿ ಪರಿಗಣಿಸಬಹುದು;

(ಬಿ) ಈ ಪ್ರಕರಣದ ಉದ್ದೇಶಕ್ಕಾಗಿ ಲೈಸೆನ್ಸು ನೀಡಲಾದ ವ್ಯಕ್ತಿಯ ನಿಯಂತ್ರಣದಲ್ಲಿರುವ ಪ್ರದೇಶ ಅಥವಾ ಆವರಣದ ವ್ಯಾಪ್ತಿಯನ್ನು ಎಷ್ಟರಮಟ್ಟಿಗೆ ನಿರ್ಬಂಧಿತ ಪ್ರದೇಶವಾಗಿ ಪರಿಗಣಿಸಬಹುದು;

(ಸಿ) ಅಣುವಿಕಿರಣದ ಮತ್ತು ಅಪಾಯಕಾರಿ ಉಪ ಉತ್ಪನ್ನಗಳ ಅಥವಾ ತ್ಯಾಜ್ಯವಸ್ತುಗಳ ಸುರಕ್ಷಿತ ವಿಲೇವಾರಿಗೆ ಸಂಬಂಧಿಸಿದಂತೆ ರಕ್ಷಣೆ ನೀಡುವುದಕ್ಕಾಗಿ ಅವಶ್ಯವಿರುವ ಷರತ್ತುಗಳು ಮತ್ತು ಮಾನದಂಡಗಳಲ್ಲಿ ಒಳಗೊಂಡಂತೆ ಈ ಪ್ರಕರಣದ ಉದ್ದೇಶಗಳಿಗಾಗಿ ಯಾವ ಸ್ಥಾವರದ ಸಂಬಂಧದಲ್ಲಿ ಲೈಸೆನ್ಸನ್ನು ಮಂಜೂರು ಮಾಡಲಾಗಿದೆಯೋ ಅಥವಾ ಮಂಜೂರು ಮಾಡಲು ಉದ್ದೇಶಿಸಲಾಗಿದೆಯೋ ಆ ಯಾವುದೇ ಸ್ಥಾವರದ ಯಾವುದೇ ಸ್ಥಾಪನೆ ಅಥವಾ ಕಾರ್ಯಾಚರಣೆಯ ಸ್ಥಳ ನಿರ್ದೇಶನಕ್ಕಾಗಿ ಷರತ್ತುಗಳು ಮತ್ತು ಮಾನದಂಡಗಳು;

(ಡಿ) ಲೈಸೆನ್ಸ್ ಇರುವ ಸ್ಥಾವರದಲ್ಲಾಗಲಿ ಅಥವಾ ಸುತ್ತಲಿನ ಪ್ರದೇಶದಲ್ಲಾಗಲಿ ಅಣು ವಿಕಿರಣಗಳನ್ನು ಅಥವಾ ಯಾವುದೇ ಅಣು ವಿಕಿರಣಕಾರಿ ಮಾಲಿನ್ಯವನ್ನು ವಿದ್ಯುತ್‌ವಾಹಿ ಕಣಗಳಾಗಿ ಮಾರ್ಪಡಿಸುವ ಮೂಲಕ ಯಾರೇ ವ್ಯಕ್ತಿಗೆ ಉಂಟಾಗುವ ಗಾಯದ ಅಥವಾ ಸ್ವತ್ತಿಗೆ ಉಂಟಾಗುವ ಯಾವುದೇ ಹಾನಿಯ ಸಂಬಂಧದಲ್ಲಿ ಲೈಸೆನ್ಸುದಾರನ ಹೊಣೆಗಾರಿಕೆಯ ವ್ಯಾಪ್ತಿ;

(ಇ) ಲೈಸೆನ್ಸಿನ ಅಡಿಯಲ್ಲಿನ ಸ್ಥಾವರದಲ್ಲಿಯೇ ಆಗಲಿ ಅಥವಾ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೇ ಆಗಲಿ ಲೈಸೆನ್ಸಿನ ಅಡಿಯಲ್ಲಿನ ಸ್ಥಾವರದಲ್ಲಿ ಅಥವಾ ಅಣುವಿಕಿರಣದ ಮಾಲಿನ್ಯದಿಂದ ಹೊರಸೂಸಿದ ಅಣುವಿಕಿರಣಗಳನ್ನು ವಿದ್ಯುದ್ವಾಹೀ ಕಣಗಳಾಗಿ ಮಾರ್ಪಡುವ ಮೂಲಕ ಯಾರೇ ವ್ಯಕ್ತಿಗೆ ಉಂಟಾದ ಯಾವುದೇ ಗಾಯ ಅಥವಾ ಸ್ವತ್ತಿಗೆ ಉಂಟಾದ ಯಾವುದೇ ಹಾನಿಯ ಸಂಬಂಧದಲ್ಲಿ ಲೈಸೆನ್ಸುದಾರನ ವಿರುದ್ಧ ಯುಕ್ತವಾಗಿ ಸಂಸ್ಥಾಪಿತವಾಗಿರುವಂಥ ಅಥವಾ ಆಗಬಹುದಾದಂಥ ಲೈಸೆನ್ಸಿನ ಅಡಿಯಲ್ಲಿ ನಿವೇಶನ ಅಥವಾ ಸ್ಥಾವರವನ್ನು ಬಳಸುವುದಕ್ಕೆ ಸಂಬಂಧಿಸಿದಂತೆ ಯಾವುವೇ ಕ್ಲೇಮುಗಳನ್ನು ಇತ್ಯರ್ಥಪಡಿಸುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲ ಸಮಯಗಳಲ್ಲಿಯೂ ವಿಮೆಯ ಮೂಲಕವಾಗಲೀ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥ ಇತರ ವಿಧಾನಗಳಿಂದಾಗಲಿ ಸಾಕಷ್ಟು ನಿಧಿಗಳು ಲಭ್ಯವಾಗುವಂತೆ ಮಾಡಲು ಲೈಸೆನ್ಸುದಾರನಿಂದ ಏರ್ಪಾಟು;

(ಎಫ್) ನಿಯೋಜಿತ ವ್ಯಕ್ತಿಗಳ ಕಡ್ಡಾಯ ವಿದ್ಯಾರ್ಹತೆ, ಭದ್ರತೆಯ ಸಂಬಂಧದ ಒಪ್ಪಿಗೆಗಳು, ಕೆಲಸದ ಗಂಟೆಗಳು, ಕನಿಷ್ಠ ರಜಾವಧಿ ಮತ್ತು ನಿಯತಕಾಲಿಕ ವೈದ್ಯಕೀಯ ಪರೀಕ್ಷೆ ಮತ್ತು ನಿಯೋಜಕನ, ನಿಯೋಜಿತ ವ್ಯಕ್ತಿಗಳ ಮತ್ತು ಇತರ ವ್ಯಕ್ತಿಗಳಿಗೆ ಸಂಬಂಧಿಸಿದ ಇತರ ಯಾವುದೇ ಅಗತ್ಯತೆಗಳು ಅಥವಾ ನಿರ್ಬಂಧಗಳು ಅಥವಾ ನಿಷೇಧಗಳು; ಮತ್ತು

(ಜಿ) ಆವರಣಗಳ ಪರಿಶೀಲನೆ ಹಾಗೂ ಅವುಗಳನ್ನು ಮೊಹರು ಮಾಡುವುದು ಮತ್ತು ನಿಯಮಗಳ ಉಲ್ಲಂಘನೆ ಮಾಡಲಾಗಿದೆಯೆಂದು ಸಂಶಯಪಡಲು ಸಮಂಜಸ ಕಾರಣಗಳಿರುವ ಯಾವುದೇ ವಸ್ತುವಿನ ಜಪ್ತಿ, ಹಿಡಿದಿಟ್ಟುಕೊಳ್ಳುವಿಕೆ ಮತ್ತು ವಿಲೇವಾರಿಯ ಉಪಬಂಧಗಳೂ ಸೇರಿದಂತೆ ಅವುಗಳ ಬಗ್ಗೆ ಕೇಂದ್ರ ಸರ್ಕಾರವು ಅವಶ್ಯವೆಂದು ಪರಿಗಣಿಸುವಂಥ ಇತರ ಪ್ರಾಸಂಗಿಕ ಅಥವಾ ಪೂರಕ ಉಪಬಂಧಗಳು

– ಇವುಗಳಿಗೆ ಉಪಬಂಧ ಕಲ್ಪಿಸಬಹುದು.

(4) ಕೇಂದ್ರ ಸರ್ಕಾರವು, (1)ನೇ ಉಪ–ಪ್ರಕರಣದ ಮೇರೆಗೆ ಲೈಸೆನ್ಸುಗಳನ್ನು ನೀಡುವುದಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕಗಳನ್ನು ಸಹ ಗೊತ್ತುಪಡಿಸಬಹುದು.

**15. ಯುರೇನಿಯಂ ಅಥವಾ ಪ್ಲುಟೋನಿಯಂಅನ್ನು ಹೊರತೆಗೆಯಲು ಯಾವುದೇ ಪದಾರ್ಥದ ಬಗ್ಗೆ ಕೋರಿಕೆ ಸಲ್ಲಿಸುವುದು.–** (1) ಯಾವುದೇ ಪದಾರ್ಥವು ಯುರೇನಿಯಂ, ಪ್ಲುಟೋನಿಯಂ ಅಥವಾ ಅದರ ಯಾವುವೇ ಐಸೋಟೋಪುಗಳನ್ನು ಒಳಗೊಂಡಿದೆಯೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವಲ್ಲಿ ಅದನ್ನು ತನಗೆ ಒಪ್ಪಿಸಬೇಕೆಂದು ಅಗತ್ಯಪಡಿಸುವ ಹಕ್ಕು ಕೇಂದ್ರ ಸರ್ಕಾರಕ್ಕಿರತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಆ ಪದಾರ್ಥವು ಒಳಗೊಂಡಿರುವ ಯುರೇನಿಯಂ, ಪ್ಲುಟೋನಿಯಂ ಅಥವಾ ಅದರ ಯಾವುವೇ ಐಸೋಟೋಪುಗಳನ್ನು ಹೊರತೆಗೆಯಬಹುದು ಮತ್ತು 21ನೇ ಪ್ರಕರಣದ ಅನುಸಾರ ನಿರ್ಧರಿಸತಕ್ಕ ಪರಿಹಾರವನ್ನು ಸಂಬಂಧಿಸಿದ ವ್ಯಕ್ತಿಗೆ ಸಂದಾಯ ಮಾಡಿದ ನಂತರ ಆ ಪದಾರ್ಥವನ್ನು ಆ ವ್ಯಕ್ತಿಗೆ ಹಿಂದಿರುಗಿಸತಕ್ಕದ್ದು:

ಪರಂತು, ಅಂಥ ಪರಿಹಾರದ ಮೊತ್ತವು ಯಾವುದೇ ಸಂದರ್ಭದಲ್ಲಿಯೂ ವ್ಯಕ್ತಿಯು ಆ ಪದಾರ್ಥದ ಉತ್ಪಾದನೆಗೆ, ಗಣಿಗಾರಿಕೆಗೆ ಅಥವಾ ಅಣುವಿಕಿರಣ ರಹಿತಗೊಳಿಸುವುದಕ್ಕೆ ಭರಿಸಲಾದ ವೆಚ್ಚವನ್ನು ಮೀರತಕ್ಕದ್ದಲ್ಲ ಮತ್ತು ಅದನ್ನು ನಿರ್ಧರಿಸುವಾಗ, ಆ ಪದಾರ್ಥದಿಂದ ಹೊರ ತೆಗೆದ ಯುರೇನಿಯಂ, ಪ್ಲುಟೋನಿಯಂ ಅಥವಾ ಅವುಗಳ ಯಾವುವೇ ಐಸೋಟೋಪುಗಳ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವುದು ಯಾವುದೂ, ಕೇಂದ್ರ ಸರ್ಕಾರವು, ವಿಧಿಸುವುದು ಸೂಕ್ತವೆಂದು ಭಾವಿಸುವಂಥ ಷರತ್ತುಗಳಿಗೊಳಪಟ್ಟು, ಪರಿಶೀಲನೆ, ಪರೀಕ್ಷೆ ಅಥವಾ ವಿಶ್ಲೇಷಣೆಯ ಉದ್ದೇಶಕ್ಕಾಗಿ ಸ್ವಾಭಾವಿಕ ಯುರೇನಿಯಂನ ಸಣ್ಣ ಪ್ರಮಾಣದ ಬಳಕೆಗೆ ಕೇಂದ್ರ ಸರ್ಕಾರವು ಅನುಮತಿಸುವುದನ್ನು ತಡೆಯತಕ್ಕದ್ದಲ್ಲ.

**16. ಅಣುವಿಕಿರಣಕಾರಿ ಪದಾರ್ಥಗಳ ಮೇಲೆ ನಿಯಂತ್ರಣ.–** ಕೇಂದ್ರ ಸರ್ಕಾರವು, ತನ್ನ ಲಿಖಿತ ಅನುಮತಿ ಇಲ್ಲದೆ ಯಾವುವೇ ಅಣುವಿಕಿರಣಕಾರಿ ಪದಾರ್ಥಗಳ ತಯಾರಿಕೆ, ಸ್ವಾಧೀನ, ಬಳಕೆ, ಮಾರಾಟದ ಮೂಲಕ ಅಥವಾ ಅನ್ಯಥಾ ವರ್ಗಾವಣೆಯ ಮೂಲಕ ಹಾಗೂ ಆಮದು ಮತ್ತು ರಫ್ತು ಮಾಡುವುದನ್ನು ಮತ್ತು ತುರ್ತು ಸಂದರ್ಭದಲ್ಲಿ ಅವುಗಳ ಸಾಗಣೆ ಮತ್ತು ವಿಲೇವಾರಿಯನ್ನು ನಿಷೇಧಿಸಬಹುದು.

**17. ಸುರಕ್ಷತೆಗೆ ವಿಶೇಷ ಉಪಬಂಧಗಳು.–** (1) ಕೇಂದ್ರ ಸರ್ಕಾರವು, ಅಣುವಿಕಿರಣಕಾರಿ ಪದಾರ್ಥಗಳನ್ನು ತಯಾರಿಸುವ, ಉತ್ಪಾದಿಸುವ, ಗಣಿಯಿಂದ ಹೊರ ತೆಗೆಯುವ, ಸಂಸ್ಕರಿಸುವ, ದಾಸ್ತಾನು ಮಾಡುವ ಅಥವಾ ಬಳಸುವ ಆವರಣಗಳು ಅಥವಾ ಸ್ಥಳಗಳಾಗಿರುವ ಯಾವುದೇ ವರ್ಗದ ಅಥವಾ ವಿವರದ ಆವರಣ ಅಥವಾ ಸ್ಥಳಗಳ ಸಂಬಂಧದಲ್ಲಿ ಅಥವಾ ಯಾವುದೇ ಅಣುವಿಕಿರಣವನ್ನು ಉಂಟು ಮಾಡುವ ಸ್ಥಾವರ, ಸಾಧನ ಸಾಮಗ್ರಿ ಅಥವಾ ಸಲಕರಣೆಯನ್ನು ಬಳಸಿದ ಸಂದರ್ಭದಲ್ಲಿ,–

(ಎ) ಅಂಥ ಆವರಣಗಳಲ್ಲಿ ಅಥವಾ ಸ್ಥಳಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳ ಅಥವಾ ಇತರ ವ್ಯಕ್ತಿಗಳ ಆರೋಗ್ಯಕ್ಕೆ ಅಣುವಿಕಿರಣದ ಮೂಲಕವಾಗಲಿ ಅಥವಾ ಯಾವುದೇ ಅಣುವಿಕಿರಣಕಾರಿ ಪದಾರ್ಥವನ್ನು ಸೇವಿಸುವ ಮೂಲಕ ಆರೋಗ್ಯಕ್ಕೆ ಹಾನಿ ಉಂಟಾಗುವುದನ್ನು ತಡೆಗಟ್ಟಲು;

(ಬಿ) ಹಿಂದೆ ಹೇಳಿದಂತೆ ಅಂಥ ತಯಾರಿಕೆ, ಉತ್ಪಾದನೆ, ಗಣಿಗಾರಿಕೆ, ಸಂಸ್ಕರಣೆ, ದಾಸ್ತಾನು ಅಥವಾ ಬಳಕೆಯ ಪರಿಣಾಮದಿಂದ ಉಂಟಾದ ಯಾವುವೇ ಅಣುವಿಕಿರಣಕಾರಿ ತ್ಯಾಜ್ಯ ಉತ್ಪನ್ನಗಳನ್ನು ಸುರಕ್ಷಿತವಾಗಿ ವಿಲೇ ಮಾಡುವುದನ್ನು ಸುನಿಶ್ಚಿತಪಡಿಸಲು;

(ಸಿ) ಅಂಥ ಆವರಣಗಳಲ್ಲಿ ಅಥವಾ ಸ್ಥಳಗಳಲ್ಲಿ ನಿಯೋಜನೆಗಾಗಿ ವ್ಯಕ್ತಿಗಳ ವಿದ್ಯಾರ್ಹತೆಗಳನ್ನು ನಿಗದಿಪಡಿಸಲು ಮತ್ತು ಅವರ ಕೆಲಸದ ಗಂಟೆಗಳು, ಕನಿಷ್ಠ ರಜೆ ಮತ್ತು ನಿಯತಕಾಲಿಕ ವೈದ್ಯಕೀಯ ಪರೀಕ್ಷೆಯನ್ನು ವಿನಿಯಮನಗೊಳಿಸಲು

– ನಿಯಮಗಳ ಮೂಲಕ, ಕೇಂದ್ರ ಸರ್ಕಾರಕ್ಕೆ ಅವಶ್ಯವೆಂದು ಕಂಡುಬರುವಂಥ ಉಪಬಂಧಗಳನ್ನು ಕಲ್ಪಿಸಬಹುದು ಮತ್ತು ನಿಯಮಗಳು ನಿರ್ದಿಷ್ಟವಾಗಿ ಮತ್ತು ಈ ಉಪ–ಪ್ರಕರಣದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಕಟ್ಟಡಗಳ ನಿರ್ಮಾಣ ಅಥವಾ ರಚನಾ ಬದಲಾವಣೆಗಳಿಗೆ ಅಥವಾ ಕೆಲಸಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಅಗತ್ಯತೆಗಳನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸಬಹುದು.

(2) ಆರೋಗ್ಯಕ್ಕೆ ಹಾನಿಕಾರಕ ಎಂಬುದಾಗಿ ಈ ಅಧಿನಿಯಮದ ಮೇರೆಗೆ ಹೊರಡಿಸಲಾದ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಅಣುವಿಕಿರಣಕಾರಿ ಪದಾರ್ಥದ ಅಥವಾ ಯಾವುದೇ ನಿರ್ದಿಷ್ಟ ಪದಾರ್ಥದ ಸಾಗಣೆಯ ಸಂಬಂಧದಲ್ಲಿ ಕೇಂದ್ರ ಸರ್ಕಾರವು, ಅಂಥ ಸಾಗಣೆಯಿಂದ ಅದರಲ್ಲಿ ನಿರತರಾದ ವ್ಯಕ್ತಿಗಳ ಮತ್ತು ಇತರ ವ್ಯಕ್ತಿಗಳ ಆರೋಗ್ಯಕ್ಕೆ ಹಾನಿಯಾಗುವುದನ್ನು ತಡೆಗಟ್ಟಲು ಅವಶ್ಯವೆಂದು ಕಂಡುಬರುವಂಥ ನಿಯಮಗಳನ್ನು ರಚಿಸಬಹುದು.

(3) ಈ ಪ್ರಕರಣದ ಮೇರೆಗೆ ಮಾಡಿದ ನಿಯಮಗಳು, ನಿಯೋಜಕರ, ನಿಯೋಜಿತ ವ್ಯಕ್ತಿಗಳ ಮತ್ತು ಇತರ ವ್ಯಕ್ತಿಗಳ ಮೇಲೆ ಅಗತ್ಯತೆಗಳನ್ನು, ನಿಷೇಧಗಳನ್ನು ಮತ್ತು ನಿರ್ಬಂಧಗಳನ್ನು ವಿಧಿಸುವುದರ ಬಗ್ಗೆ ಉಪಬಂಧ ಕಲ್ಪಿಸಬಹುದು.

(4) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದಿಂದ ಅಧಿಕೃತನಾದ ಯಾರೇ ವ್ಯಕ್ತಿಯು, ತನಗೆ ನೀಡಿದ ಅಧಿಕಾರವನ್ನು ತೋರಿಸುವ ಯುಕ್ತ ಪ್ರಮಾಣೀಕೃತ ದಸ್ತಾವೇಜನ್ನು ಅಗತ್ಯಪಡಿಸಿದರೆ ಅದನ್ನು ಹಾಗೆ ಹಾಜರುಪಡಿಸಿದ ನಂತರ ಯಾವುದೇ ಆವರಣ ಅಥವಾ ವಾಹನ, ನೌಕೆ ಅಥವಾ ವಿಮಾನದಲ್ಲಿ ಅಥವಾ ಅದರ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಉಲ್ಲಂಘನೆಯನ್ನು ಮಾಡಲಾಗಿದೆಯೇ ಅಥವಾ ಮಾಡಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಎಲ್ಲ ಸೂಕ್ತ ವೇಳೆಗಳಲ್ಲಿ ಯಾವುದೇ ಆವರಣವನ್ನು ಅಥವಾ ಯಾವುದೇ ವಾಹನ, ನೌಕೆ ಅಥವಾ ವಿಮಾನವನ್ನು ಪ್ರವೇಶಿಸಬಹುದು.

(5) ಈ ಪ್ರಕರಣದ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಉಲ್ಲಂಘನೆಯಾಗಿರುವ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು, ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಮತ್ತು ಆವರಣ, ವಾಹನ, ನೌಕೆ ಅಥವಾ ವಿಮಾನವನ್ನು ಸೀಲ್ ಮಾಡುವ ಮತ್ತು ಅಣುವಿಕಿರಣಕಾರಿ ಪದಾರ್ಥಗಳನ್ನು ಮತ್ತು ಮಲಿನಗೊಂಡ ಸಾಧನ ಸಾಮಗ್ರಿಯನ್ನು ಜಫ್ತಿ ಮಾಡುವ ಸಂಬಂಧದಲ್ಲಿ 24ನೇ ಪ್ರಕರಣದ ಮೇರೆಗೆ ದಂಡನೆಗಳನ್ನು ಜಾರಿಗೊಳಿಸುವ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳುವ ಹಕ್ಕೂ ಸೇರಿದಂತೆ, ಅಣುವಿಕಿರಣಕಾರಿ ಪದಾರ್ಥದಿಂದ ಅಣುವಿಕಿರಣ ಅಥವಾ ಮಾಲಿನ್ಯದಿಂದಾಗಿ ವ್ಯಕ್ತಿಗಳಿಗೆ ಮತ್ತಷ್ಟು ಹಾನಿ ಉಂಟಾಗುವುದನ್ನು ಅಥವಾ ಸ್ವತ್ತಿಗೆ ನಷ್ಟ ಉಂಟಾಗುವುದನ್ನು ತಡೆಗಟ್ಟಲು ಅದು ಅವಶ್ಯವೆಂದು ಭಾವಿಸುವಂಥ ಕ್ರಮಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.

**18. ಮಾಹಿತಿಯನ್ನು ಬಹಿರಂಗಗೊಳಿಸುವುದರ ಮೇಲೆ ನಿರ್ಬಂಧ.**– (1) ಕೇಂದ್ರ ಸರ್ಕಾರವು,–

(ಎ) ಅಣುಶಕ್ತಿಯನ್ನು ಉತ್ಪಾದಿಸುವ, ಅಭಿವೃದ್ಧಿಗೊಳಿಸುವ ಅಥವಾ ಬಳಸುವ ಉದ್ದೇಶಕ್ಕಾಗಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಈಗಿರುವ ಅಥವಾ ಪ್ರಸ್ತಾವಿತ ಸ್ಥಾವರ; ಅಥವಾ

(ಬಿ) ಅಂಥ ಯಾವುದೇ ಈಗಿರುವ ಅಥವಾ ಪ್ರಸ್ತಾವಿತ ಸ್ಥಾವರದ ಕಾರ್ಯಾಚರಣೆಯ ಉದ್ದೇಶ ಅಥವಾ ವಿಧಾನ; ಅಥವಾ

(ಸಿ) ಅಂಥ ಯಾವುದೇ ಈಗಿರುವ ಅಥವಾ ಪ್ರಸ್ತಾವಿತ ಸ್ಥಾವರದಲ್ಲಿ ಕಾರ್ಯಾಚರಣೆಗೊಳಿಸಿದ ಅಥವಾ ಕಾರ್ಯಾಚರಣೆಗೊಳಿಸಲು ಉದ್ದೇಶಿಸಲಾದ ಯಾವುದೇ ಪ್ರಕ್ರಿಯೆ

– ಇವುಗಳಿಗೆ ಸಂಬಂಧಿಸಿದ, ಇವುಗಳನ್ನು ನಿರೂಪಿಸುವ ಅಥವಾ ಉದಾಹರಿಸುವ ದಸ್ತಾವೇಜು, ರೇಖಾಚಿತ್ರ, ಛಾಯಾಚಿತ್ರ, ನಕ್ಷೆ, ಮಾದರಿಯಲ್ಲಿಯೇ ಆಗಲಿ ಅಥವಾ ಇತರ ಯಾವುದೇ ರೂಪದಲ್ಲಿ ಆಗಲಿ ಒಳಗೊಂಡಿರುವ ಮಾಹಿತಿಯನ್ನು ಬಹಿರಂಗಗೊಳಿಸುವುದನ್ನು ಆದೇಶದ ಮೂಲಕ ನಿರ್ಬಂಧಿಸಬಹುದು.

(2) ಯಾರೇ ವ್ಯಕ್ತಿಯು,–

(ಎ) (1)ನೇ ಉಪ–ಪ್ರಕರಣದ ಮೇರೆಗೆ ನಿರ್ಬಂಧಿಸಲಾದ ಯಾವುದೇ ಮಾಹಿತಿಯನ್ನು ಬಹಿರಂಗಗೊಳಿಸತಕ್ಕದ್ದಲ್ಲ, ಅಥವಾ ಪಡೆಯತಕ್ಕದ್ದಲ್ಲ ಅಥವಾ ಪಡೆಯಲು ಪ್ರಯತ್ನಿಸತಕ್ಕದ್ದಲ್ಲ; ಅಥವಾ

(ಬಿ) ಕೇಂದ್ರ ಸರ್ಕಾರದ ಅಧಿಕಾರ ನೀಡಿದ್ದ ಹೊರತು, ಈ ಅಧಿನಿಯಮದ ಮೇರೆಗೆ ಯಾವುವೇ ಪ್ರಕಾರ್ಯಗಳನ್ನು ನೆರವೇರಿಸುವಾಗ ಅಥವಾ ತನ್ನ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವಾಗ ಪಡೆದ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿರುವುದು ಯಾವುದೂ,-

(i) ಆ ಬಗೆಯ ಸ್ಥಾವರವನ್ನು ಅಣುಶಕ್ತಿಯನ್ನು ಉತ್ಪಾದಿಸಲು, ಅಭಿವೃದ್ಧಿಪಡಿಸಲು ಅಥವಾ ಬಳಸಲು ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳಲ್ಲಿ ಸಂಶೋಧನೆ ನಡೆಸಲು ಬಳಸಲಾಗುತ್ತಿದೆ ಅಥವಾ ಬಳಸಲು ಉದ್ದೇಶಿಸಲಾಗಿದೆ ಎಂದು ಮಾಹಿತಿ ಬಹಿರಂಗಪಡಿಸದ ಹೊರತು, ಅಣುಶಕ್ತಿಯ ಉತ್ಪಾದನೆ, ಅಭಿವೃದ್ಧಿ ಅಥವಾ ಬಳಕೆಯ ಹೊರತಾದ ಉದ್ದೇಶಗಳಿಗಾಗಿ ಬಳಕೆಯಲ್ಲಿರುವ ಯಾವುದೇ ಬಗೆಯ ಸ್ಥಾವರದ ಸಂಬಂಧದಲ್ಲಿ ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ; ಅಥವಾ

(ii) ಯಾವುದೇ ಮಾಹಿತಿಯನ್ನು ಈ ಪ್ರಕರಣವನ್ನು ಉಲ್ಲಂಘಿಸದೆ ಅನ್ಯಥಾ ಸಾರ್ವಜನಿಕರಿಗೆ ದೊರೆಯುವಂತೆ ಮಾಡಿದ್ದು, ಅದು ಆ ಮಾಹಿತಿಗೆ ಸಂಬಂಧಿಸಿದಂತೆ ತರುವಾಯದ ಯಾವುದೇ ಬಹಿರಂಗಗೊಳಿಸುವಿಕೆಗೆ

– ಅನ್ವಯವಾಗತಕ್ಕದ್ದಲ್ಲ.

**19. ನಿಷಿದ್ಧ ಪ್ರದೇಶಗಳೊಳಗೆ ಪ್ರವೇಶಿಸುವುದನ್ನು ತಡೆಗಟ್ಟುವುದು.**– ಕೇಂದ್ರ ಸರ್ಕಾರವು ಆದೇಶದ ಮೂಲಕ,-

(ಎ) ಯಾರೇ ವ್ಯಕ್ತಿಯು ಅನುಮತಿ ಇಲ್ಲದೆ ನಿಷಿದ್ಧ ಪ್ರದೇಶದೊಳಗೆ ಪ್ರವೇಶಿಸುವುದನ್ನು; ಮತ್ತು

(ಬಿ) ಯಾರೇ ವ್ಯಕ್ತಿಗಳು ಅನುಮತಿ ಇಲ್ಲದೆ ಒಂದು ನಿಷಿದ್ಧ ಪ್ರದೇಶದಿಂದ ಯಾವುದೇ ಛಾಯಾಚಿತ್ರ, ಕರಡು ಚಿತ್ರ, ಚಿತ್ರಗಳು, ರೇಖಾಚಿತ್ರ, ನಕ್ಷೆ ಅಥವಾ ಇತರ ದಸ್ತಾವೇಜನ್ನು ತೆಗೆದುಕೊಳ್ಳುವುದನ್ನು ನಿರ್ಬಂಧಿಸಬಹುದು ಮತ್ತು ಈ ಕೆಲಸಗಳನ್ನು ಮಾಡಲು ಯಾವುದೇ ಅನುಮತಿಯನ್ನು ನೀಡಿರುವಲ್ಲಿ, ಅದು ಕೇಂದ್ರ ಸರ್ಕಾರವು ಅವಶ್ಯವೆಂದು ಪರಿಗಣಿಸುವ ಷರತ್ತುಗಳಿಗೊಳಪಟ್ಟಿರತಕ್ಕದ್ದು.

**20. ಆವಿಷ್ಕಾರಗಳಿಗೆ ವಿಶೇಷ ಉಪಬಂಧಗಳು.**– (1) ಈ ಅಧಿನಿಯಮವು ಪ್ರಾರಂಭವಾದಂದಿನಿಂದ, ಅಣುಶಕ್ತಿಯ ಉತ್ಪಾದನೆ, ನಿಯಂತ್ರಣ, ಬಳಕೆ ಅಥವಾ ವಿಲೇವಾರಿಯ ಅಥವಾ ಯಾವುದೇ ನಿಯಮಿಸಿದ ಪದಾರ್ಥದ ಅಥವಾ ಅಣುವಿಕಿರಣಕಾರಿ ಪದಾರ್ಥದ ಅನ್ವೇಷಣೆ, ಗಣಿಗಾರಿಕೆ, ಹೊರ ತೆಗೆಯುವಿಕೆ, ಉತ್ಪಾದನೆ, ಭೌತಿಕ ಮತ್ತು ರಾಸಾಯನಿಕ ಸಂಸ್ಕರಣೆ, ಕೃತ್ರಿಮ ತಯಾರಿಕೆ, ಅಭಿವೃದ್ಧಿಗೊಳಿಸುವಿಕೆ, ಕ್ಯಾನುಗಳಲ್ಲಿ ತುಂಬುವುದು ಅಥವಾ ಅಣುಶಕ್ತಿ ಕಾರ್ಯಾಚರಣೆಗಳಲ್ಲಿ ಸುರಕ್ಷತೆಯನ್ನು ನಿಶ್ಚಿತಗೊಳಿಸುವಲ್ಲಿ ಉಪಯುಕ್ತವೆಂದು ಅಥವಾ ಸಂಬಂಧಿಸಿದವುಗಳೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವ ಆವಿಷ್ಕಾರಗಳಿಗೆ ಯಾವುವೇ ಪೇಟೆಂಟುಗಳನ್ನು ನೀಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ನಿಷೇಧವು, ಪೇಟೆಂಟುಗಳ ಮತ್ತು ವಿನ್ಯಾಸಗಳ ಅಧಿನಿಯಮ, 1911 (1911ರ 2)ರ ಮೇರೆಗೆ ನೇಮಕ ಮಾಡಲಾದ ಪೇಟೆಂಟುಗಳ ಮತ್ತು ವಿನ್ಯಾಸಗಳ ನಿಯಂತ್ರಕರಿಗೆ, ಈ ಅಧಿನಿಯಮವು ಪ್ರಾರಂಭವಾಗುವ ಮೊದಲು ಮತ್ತು ಅಂಥ ಪ್ರಾರಂಭದಲ್ಲಿ ಅವನ ಮುಂದೆ ಇತ್ಯರ್ಥದಲ್ಲಿರುವ ಪೇಟೆಂಟ್ ಮಂಜೂರಾತಿಗಾಗಿ ಯಾವ ಉಪಪ್ರಕರಣದ ಸಂಬಂಧದಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ, ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ ಯಾವುದೇ ಆವಿಷ್ಕಾರಕ್ಕೂ ಸಹ ಅನ್ವಯವಾಗತಕ್ಕದ್ದು.

(3) ಕೇಂದ್ರ ಸರ್ಕಾರವು, ಇತ್ಯರ್ಥದಲ್ಲಿರುವ ಯಾವುದೇ ಪೇಟೆಂಟ್ ಅರ್ಜಿಯನ್ನು ಮತ್ತು ತಪಶೀಲನ್ನು, ಅಂಗೀಕರಿಸುವ ಮೊದಲು ಯಾವುದೇ ಸಮಯದಲ್ಲಿ ಪರಿಶೀಲಿಸುವ ಮತ್ತು ಆವಿಷ್ಕಾರವು ಅಣುಶಕ್ತಿಗೆ ಸಂಬಂಧಪಟ್ಟಿದೆ ಎಂಬುದಾಗಿ ಪರಿಗಣಿಸಿದರೆ, ಆ ಕಾರಣದ ಮೇಲೆ ಅರ್ಜಿಯನ್ನು ನಿರಾಕರಿಸುವಂತೆ ಪೇಟೆಂಟುಗಳ ಮತ್ತು ವಿನ್ಯಾಸಗಳ ನಿಯಂತ್ರಕರಿಗೆ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಆವಿಷ್ಕಾರವನ್ನು ಮಾಡಿರುವ ಯಾರೇ ವ್ಯಕ್ತಿಯು ಆ ಆವಿಷ್ಕಾರವು ಅಣುಶಕ್ತಿಗೆ ಸಂಬಂಧಪಟ್ಟಿದ್ದು ಎಂದು ಆತನಿಗೆ ನಂಬಲು ಕಾರಣವಿದ್ದರೆ, ಆತನು ಆವಿಷ್ಕಾರದ ಸ್ವರೂಪ ಮತ್ತು ವಿವರಣೆಯನ್ನು ಕುರಿತು ಕೇಂದ್ರ ಸರ್ಕಾರಕ್ಕೆ ತಿಳಿಸತಕ್ಕದ್ದು.

(5) ಯಾರೇ ವ್ಯಕ್ತಿಯು, ಅಣುಶಕ್ತಿಗೆ ಸಂಬಂಧಪಟ್ಟ ಅಥವಾ ಅಣುಶಕ್ತಿಗೆ ಸಂಬಂಧಪಟ್ಟಿದ್ದೆಂದು ನಂಬಲು ಕಾರಣವಿರುವ ಆವಿಷ್ಕಾರಕ್ಕಾಗಿ ವಿದೇಶದಲ್ಲಿ ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಬಯಸಿದರೆ, ಆತನು, ಆ ಕುರಿತು ಕೇಂದ್ರ ಸರ್ಕಾರವನ್ನು ಅನುಮತಿಗಾಗಿ ಕೋರಿಕೆ ಸಲ್ಲಿಸಿ ಮೂರು ತಿಂಗಳ ಅವಧಿಯು ಮೀರಿದ್ದು ಮತ್ತು ಆ ಬಗ್ಗೆ ಆತನು ಯಾವುದೇ ಉತ್ತರವನ್ನು ಸ್ವೀಕರಿಸದಿದ್ದ ಹೊರತು ವಿದೇಶದಲ್ಲಿ ಅರ್ಜಿ ಸಲ್ಲಿಸುವ ಅಥವಾ ವಿದೇಶದಲ್ಲಿನ ಯಾರೇ ವ್ಯಕ್ತಿಗೆ ಆವಿಷ್ಕಾರದ ವಿಷಯವನ್ನು ತಿಳಿಸುವ ಮೊದಲು ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.

(6) ಪೇಟೆಂಟುಗಳ ಮತ್ತು ವಿನ್ಯಾಸಗಳ ನಿಯಂತ್ರಕನು, ಆವಿಷ್ಕಾರವು ಅಣುಶಕ್ತಿಗೆ ಸಂಬಂಧಿಪಟ್ಟಿದ್ದೇ, ಅಲ್ಲವೇ ಎಂಬುದರ ಬಗ್ಗೆ ನಿರ್ದೇಶನಗಳಿಗಾಗಿ ಯಾವುದೇ ಅರ್ಜಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಕುರಿತು ಕೇಂದ್ರ ಸರ್ಕಾರವು ನೀಡುವ ನಿರ್ದೇಶನವು ಅಂತಿಮವಾಗಿರತಕ್ಕದ್ದು.

(7) ಅಣುಶಕ್ತಿಯ ಕ್ಷೇತ್ರದಲ್ಲಿನ ಯಾವುದೇ ಆವಿಷ್ಕಾರವನ್ನು ಕೇಂದ್ರ ಸರ್ಕಾರದಿಂದ ನಿಯಂತ್ರಿತವಾದ ಸಂಸ್ಥೆಗಳಲ್ಲಿ ರೂಪಿಸಲಾಗಿರಲಿ ಅಥವಾ ಕೇಂದ್ರ ಸರ್ಕಾರದೊಂದಿಗೆ ಮಾಡಿಕೊಂಡ ಯಾವುದೇ ಕರಾರು, ಉಪ ಕರಾರು, ವ್ಯವಸ್ಥೆ ಅಥವಾ ಇತರ ಸಂಬಂಧದ ಅಡಿಯಲ್ಲಿ ರೂಪಿಸಲಾಗಿರಲಿ ಅಂಥ ಕರಾರು, ಉಪ ಕರಾರು, ವ್ಯವಸ್ಥೆ ಅಥವಾ ಇತರ ಸಂಬಂಧಗಳು ಕೇಂದ್ರ ಸರ್ಕಾರದಿಂದ ಹಣಕಾಸಿನ ಸಹ ಭಾಗಿತ್ವ ಅಥವಾ ನೆರವನ್ನು ಒಳಗೊಂಡಿವೆಯೇ, ಇಲ್ಲವೇ ಎಂಬುದನ್ನು ಪರಿಗಣಿಸದೆ, ಕೇಂದ್ರ ಸರ್ಕಾರದಿಂದ ಮಾಡಲಾಗಿದೆ ಅಥವಾ ರೂಪಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

(8) ಭಾರತೀಯ ಪೇಟೆಂಟುಗಳ ಮತ್ತು ವಿನ್ಯಾಸಗಳ ಅಧಿನಿಯಮ, 1911ರಲ್ಲಿ ಏನೇ ಒಳಗೊಂಡಿದ್ದರೂ ಸಹ, ಈ ಪ್ರಕರಣಕ್ಕೆ ಸಂಬಂಧಿಸಿದ ಅಥವಾ ಇದರಿಂದಾಗಿ ಉದ್ಭವಿಸುವ ಅಂಶಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**21. ಪರಿಹಾರವನ್ನು ಸಂದಾಯ ಮಾಡುವುದಕ್ಕೆ ಸಂಬಂಧಿಸಿದ ಸೂತ್ರಗಳು.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಮೇರೆಗಿನ ಯಾವುವೇ ಅಧಿಕಾರಗಳನ್ನು ಚಲಾಯಿಸುವ ಕಾರಣದಿಂದಾಗಿ, ಯಾವುದೇ ಪರಿಹಾರದ ಮೊತ್ತವನ್ನು ಸಂದಾಯ ಮಾಡಬೇಕಾಗಿರುವಲ್ಲಿ ಅಂಥ ಪರಿಹಾರದ ಮೊಬಲಗನ್ನು ಇಲ್ಲಿ ಇನ್ನು ಮುಂದೆ ತಿಳಿಸಿದ ರೀತಿಯಲ್ಲಿ ಮತ್ತು ಸೂತ್ರಗಳಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು, ಎಂದರೆ,–

(ಎ) ಪರಿಹಾರದ ಮೊತ್ತವನ್ನು ಒಪ್ಪಂದದ ಮೂಲಕ ನಿಗದಿಪಡಿಸಿದಾಗ, ಅದನ್ನು ಅಂಥ ಒಪ್ಪಂದದ ಅನುಸಾರವಾಗಿ ಸಂದಾಯ ಮಾಡತಕ್ಕದ್ದು;

(ಬಿ) ಅಂಥ ಯಾವುದೇ ಒಪ್ಪಂದಕ್ಕೆ ಬರಲಾಗದಿದ್ದಲ್ಲಿ, ಕೇಂದ್ರ ಸರ್ಕಾರವು ಬಾಧಿತವಾದ ಹಕ್ಕಿನ ಸ್ವರೂಪದ ಬಗೆಗೆ ಜ್ಞಾನವಿದ್ದ ತಜ್ಞ ವ್ಯಕ್ತಿಯನ್ನು ಮಧ್ಯಸ್ಥಗಾರನನ್ನಾಗಿ ನೇಮಕ ಮಾಡತಕ್ಕದ್ದು, ಆತನು ಸಂದಾಯ ಮಾಡಬೇಕಾದ ಪರಿಹಾರದ ಮೊತ್ತವನ್ನು ನಿರ್ಧರಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ನೇಮಕ ಮಾಡಲಾದ ಮಧ್ಯಸ್ಥಗಾರನು, ತನ್ನ ಐತೀರ್ಪನ್ನು ಕೊಡುವಾಗ,–

(ಎ) 9ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಪರಿಹಾರದ ಸಂದರ್ಭದಲ್ಲಿ,–

(i) ಮಾಡಿದ ಕೆಲಸದ ಸ್ವರೂಪ;

(ii) ಆ ಪ್ರಕರಣದ ಮೇರೆಗಿನ ಯಾವುವೇ ಅಧಿಕಾರಗಳನ್ನು ಚಲಾಯಿಸುವ ರೀತಿ, ಅದರ ವ್ಯಾಪ್ತಿ ಮತ್ತು ಅದರ ಅವಧಿ;

(iii) ಯಾವುದೇ ಅವಧಿಯಲ್ಲಿ ಸೂಕ್ತವಾಗಿ ನಿರೀಕ್ಷಿಸಬಹುದಾದ, ಭೂಮಿಯ ಮತ್ತು ಅಲ್ಲಿರುವ ಸ್ವತ್ತಿನ ಬಾಡಿಗೆಯಲ್ಲಿ ಇಳಿಕೆ ಅಥವಾ ಅಧಿಕಾರಗಳನ್ನು ಚಲಾಯಿಸುವುದು ಎಂದು ಕೊನೆಗೊಳ್ಳುವುದೋ ಆ ದಿನಾಂಕದಂದು ಭೂಮಿಯ ಮತ್ತು ಸ್ವತ್ತಿನ ಮಾರುಕಟ್ಟೆ ಮೌಲ್ಯದಲ್ಲಿ ಇಳಿಕೆ; ಮತ್ತು

(iv) ಭೂ ಆರ್ಜನಾ ಅಧಿನಿಯಮ, 1894ರ (1894ರ 1) 23ನೇ ಪ್ರಕರಣದ (1)ನೇ ಉಪ ಪ್ರಕರಣದ ಉಪಬಂಧಗಳು 9ನೇ ಪ್ರಕರಣದ ಮೇರೆಗಿನ ಅಧಿಕಾರಗಳ ಚಲಾವಣೆಗೆ ಅಂಥ ಉಪಬಂಧಗಳು ಅನ್ವಯವಾಗುವಷ್ಟರ ಮಟ್ಟಿಗೆ ; ಮತ್ತು

(ಬಿ) 11ನೇ ಪ್ರಕರಣದ ಅಥವಾ 12ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಪರಿಹಾರದ ಸಂದರ್ಭದಲ್ಲಿ, ಆರ್ಜನಾ ದಿನಾಂಕದ ನಿಕಟಪೂರ್ವದಲ್ಲಿ ಮಾಲಿಕನು ಮಾಡಿದ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ ಅವನು ಪಡೆಯಲು ಯುಕ್ತವಾಗಿ ನಿರೀಕ್ಷಿಸಬಹುದಾದ ಬೆಲೆ

– ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(3) ಕ್ಲೇಮು ಮಾಡಿದ ಮೊತ್ತವು ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ಗೊತ್ತುಪಡಿಸಿದ ಮೊತ್ತಕ್ಕಿಂತ ಹೆಚ್ಚಾಗದಿದ್ದ ಸಂದರ್ಭಗಳ ಹೊರತು, ಮಧ್ಯಸ್ಥಗಾರನ ಐತೀರ್ಪಿನ ವಿರುದ್ಧ ಒಂದು ಅಪೀಲನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು.

(4) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ, ಮಧ್ಯಸ್ಥಗಾರಿಕೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳನ್ನು ಗೊತ್ತುಪಡಿಸುವ ನಿಯಮಗಳನ್ನು ಮತ್ತು ಮಧ್ಯಸ್ಥಗಾರನ ಮುಂದಿರುವ ವ್ಯವಹರಣೆಗಳ ಮತ್ತು ಅಪೀಲಿನ ಮೇಲಿನ ವೆಚ್ಚಗಳ ಹಂಚಿಕೆಯಲ್ಲಿ ಅನುಸರಿಸಬೇಕಾದ ಸೂತ್ರಗಳನ್ನು ರಚಿಸಬಹುದು.

(5) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನು ಹೊರತುಪಡಿಸಿ, ಮಧ್ಯಸ್ಥಗಾರಿಕೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಅದು ಈ ಅಧಿನಿಯಮದ ಮೇರೆಗೆ ಮಧ್ಯಸ್ಥಗಾರಿಕೆಗೆ ಅನ್ವಯವಾಗತಕ್ಕದ್ದಲ್ಲ.

**22. ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ.**– (1) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರಲ್ಲಿ (1948ರ 54) ಏನೇ ಒಳಗೊಂಡಿದ್ದಾಗ್ಯೂ, ಕೇಂದ್ರ ಸರ್ಕಾರವು,–

(ಎ) ಅಣುಶಕ್ತಿಗೆ ಸಂಬಂಧಿಸಿದಂತೆ ಒಂದು ತರ್ಕಬದ್ಧವಾದ ಮತ್ತು ಸಮರ್ಪಕವಾದ ರಾಷ್ಟ್ರೀಯ ಕಾರ್ಯನೀತಿಯನ್ನು ಅಭಿವೃದ್ಧಿಗೊಳಿಸಲು, ಅಂಥ ಕಾರ್ಯನೀತಿಯನ್ನು ಆ ಅಧಿನಿಯಮದ 3ನೇ ಮತ್ತು 5ನೇ ಪ್ರಕರಣದ ಮೇರೆಗೆ ಅನುಕ್ರಮವಾಗಿ ರಚಿತವಾದ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದೊಂದಿಗೆ ಮತ್ತು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗಳೊಂದಿಗೆ ಮತ್ತು ಇತರ ವಿದ್ಯುಚ್ಛಕ್ತಿ ಸಂಪನ್ಮೂಲಗಳ ನಿಯಂತ್ರಣ ಮತ್ತು ಬಳಕೆಗೆ ಸಂಬಂಧಪಟ್ಟ ಅಂತಹವೇ ಇತರ ಶಾಸನಬದ್ಧ ನಿಗಮಗಳೊಂದಿಗೆ ಸಮನ್ವಯಗೊಳಿಸಲು ಅಂಥ ಕಾರ್ಯನೀತಿಯ ಅನುಸಾರ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಯೋಜನೆಗಳನ್ನು ಕಾರ್ಯಗತಗೊಳಿಸಲು ಮತ್ತು ಹಾಗೆ ಉತ್ಪಾದಿಸಲಾದ ವಿದ್ಯುಚ್ಛಕ್ತಿಯ ಸರಬರಾಜಿಗೆ ಸಂಬಂಧಿಸಿದಂತೆ ತಾನು ಒಪ್ಪಂದ ಮಾಡಿಕೊಳ್ಳತಕ್ಕ ಅಂಥ ಸಂಬಂಧಪಟ್ಟ ಮಂಡಳಿಗಳೊಂದಿಗೆ ಅಥವಾ ನಿಗಮಗಳೊಂದಿಗೆ ಸಮಾಲೋಚಿಸಿ ನಿರ್ಧರಿಸುವ ರೀತಿಯಲ್ಲಿ ಅಣುಶಕ್ತಿ ಕೇಂದ್ರಗಳನ್ನು ತಾನೇ ಅಥವಾ ತನ್ನಿಂದ ಅಥವಾ ಒಂದು ಸರ್ಕಾರಿ ಕಂಪನಿಯಿಂದ ಸ್ಥಾಪಿತವಾದ ಯಾವುದೇ ಪ್ರಾಧಿಕಾರ ಅಥವಾ ನಿಗಮದ ಮೂಲಕ ನಿರ್ವಹಿಸಲು;

(ಬಿ) ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ತಾನೇ ಅಥವಾ ತನ್ನಿಂದ ಅಥವಾ ಒಂದು ಸರ್ಕಾರಿ ಕಂಪನಿಯಿಂದ ಸ್ಥಾಪಿತವಾದ ಯಾವುದೇ ಪ್ರಾಧಿಕಾರ ಅಥವಾ ನಿಗಮದ ಮೂಲಕ ಅಣುಶಕ್ತಿ ಕೇಂದ್ರಗಳು ಮಾಡುವ ವಿದ್ಯುಚ್ಛಕ್ತಿಯ ಸರಬರಾಜಿಗೆ ದರಗಳನ್ನು ನಿಗದಿಪಡಿಸಲು ಮತ್ತು ಅದನ್ನು ವಿನಿಯಮಿಸಲು;

(ಸಿ) ಯಾವ ರಾಜ್ಯದಲ್ಲಿ ಅಣುಶಕ್ತಿ ಕೇಂದ್ರ ಇದೆಯೋ ಆ ರಾಜ್ಯದ ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ಇತರ ಯಾವುದೇ ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ರವಾನಿಸುವುದಕ್ಕಾಗಿ ತಾನೇ ಅಥವಾ ತನ್ನಿಂದ ಅಥವಾ ಸರ್ಕಾರಿ ಕಂಪನಿಯಿಂದ ಸ್ಥಾಪಿತವಾದ ಯಾವುದೇ ಪ್ರಾಧಿಕಾರದ ಅಥವಾ ನಿಗಮದ ಮೂಲಕ ಏರ್ಪಾಡುಗಳನ್ನು ಮಾಡಿಕೊಳ್ಳಲು

– ಅಧಿಕಾರ ಹೊಂದಿರತಕ್ಕದ್ದು:

ಪರಂತು, ಅವಶ್ಯಕವಾದ ಪ್ರಸರಣ ಮಾರ್ಗಗಳ ನಿರ್ಮಾಣ ಕುರಿತಂತೆ, ಕೇಂದ್ರ ಸರ್ಕಾರದ ಅಥವಾ ಸಂದರ್ಭಾನುಸಾರ ಅಂಥ ಪ್ರಾಧಿಕಾರದ ಅಥವಾ ನಿಗಮದ ಅಥವಾ ಸರ್ಕಾರಿ ಕಂಪನಿಯ ಮತ್ತು ಯಾವುದೇ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ನಡುವೆ ಭಿನ್ನಾಭಿಪ್ರಾಯ ಉಂಟಾದರೆ, ಆ ವಿಷಯವನ್ನು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ಆ ಪ್ರಾಧಿಕಾರದ ತೀರ್ಮಾನವು ಸಂಬಂಧಪಟ್ಟ ಪಕ್ಷಕಾರರ ಮೇಲೆ ಬಂಧನಕಾರಿಯಾಗಿರತಕ್ಕದ್ದು.

(2) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಅಂಥ ಕಾನೂನಿನ ಅಥವಾ ನಿಯಮದ ಕಾರಣದಿಂದಾಗಿ ಪರಿಣಾಮ ಹೊಂದಿರುವ ಯಾವುದೇ ಲಿಖಿತದ ಯಾವುದೇ ಉಪಬಂಧವು ಈ ಅಧಿನಿಯಮದ ಯಾವುದೇ ಉಪಬಂಧಗಳೊಂದಿಗೆ ಅಸಂಗತವಾಗಿರುವಷ್ಟರಮಟ್ಟಿಗೆ ಯಾವುದೇ ಪರಿಣಾಮವನ್ನು ಹೊಂದಿರತಕ್ಕದ್ದಲ್ಲ.

(3) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳು ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ಕ್ಕೆ ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ಕ್ಕೆ ಹೆಚ್ಚಿಗೆಯಾಗಿರತಕ್ಕದ್ದು, ಮತ್ತು ಅವುಗಳನ್ನು ಕುಂಠಿತಗೊಳಿಸುವಂತಿರತಕ್ಕದ್ದಲ್ಲ.

**23. ಕಾರ್ಖಾನೆಗಳ ಅಧಿನಿಯಮ, 1948ರ ನಿರ್ವಹಣೆ.–** 1948ರ ಕಾರ್ಖಾನೆಗಳ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಸದರಿ ಅಧಿನಿಯಮವನ್ನು ನಿರ್ವಹಿಸುವ ಮತ್ತು ಪರಿವೀಕ್ಷಣಾ ಸಿಬ್ಬಂದಿಯನ್ನು ನೇಮಕ ಮಾಡುವುದು ಮತ್ತು ಅದರ ಮೇರೆಗೆ ನಿಯಮಗಳನ್ನು ರಚಿಸುವುದೂ ಒಳಗೊಂಡಂತೆ ಅದರ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಎಲ್ಲ ಕಾರ್ಯಗಳನ್ನು ಮಾಡುವ ಅಧಿಕಾರವು, ಕೇಂದ್ರ ಸರ್ಕಾರವು ಅಥವಾ ಅದರಿಂದ ಅಥವಾ ಒಂದು ಸರ್ಕಾರಿ ಕಂಪನಿಯಿಂದ ಸ್ಥಾಪಿತವಾದ ಯಾವುದೇ ಪ್ರಾಧಿಕಾರವು ಅಥವಾ ನಿಗಮವು ಒಡೆತನ ಹೊಂದಿರುವ ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದರಲ್ಲಿ ನಿರತವಾದ ಯಾವುದೇ ಕಾರ್ಖಾನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು.

**24. ಅಪರಾಧಗಳು ಮತ್ತು ದಂಡನೆಗಳು.–** (1) ಯಾರೇ ವ್ಯಕ್ತಿಯು,–

(ಎ) 14ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ಅಥವಾ ಆ ಪ್ರಕರಣದ ಮೇರೆಗೆ ಯಾವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸ್‌ನ್ನು ಮಂಜೂರು ಮಾಡಲಾಗಿದೆಯೋ ಆ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ; ಅಥವಾ

(ಬಿ) 17ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ನಿಯಮವನ್ನು ಅಥವಾ ಯಾವುದೇ ಅಂಥ ನಿಯಮದ ಮೇರೆಗೆ ವಿಧಿಸಿದ ಅಗತ್ಯತೆ, ನಿಷೇಧ ಅಥವಾ ನಿರ್ಬಂಧವನ್ನು ಉಲ್ಲಂಘಿಸಿದರೆ; ಅಥವಾ

(ಸಿ) 17ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯನ್ನು ಆ ಉಪ-ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಡ್ಡಿಪಡಿಸಿದರೆ; ಅಥವಾ

(ಡಿ) 18ನೇ ಪ್ರಕರಣದ (2)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿದರೆ

– ಅವನು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು,-

(ಎ) 5ನೇ ಪ್ರಕರಣದ ಮೇರೆಗೆ ತನ್ನ ಮೇಲೆ ಜಾರಿಗೊಳಿಸಿದ ಯಾವುದೇ ನೋಟೀಸನ್ನು ಪಾಲಿಸಲು ಅಥವಾ ಆ ಪ್ರಕರಣದ ಮೇರೆಗೆ ಅವನ ಮೇಲೆ ವಿಧಿಸಬಹುದಾದ ಯಾವುವೇ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸಲು ವಿಫಲನಾದರೆ; ಅಥವಾ

(ಬಿ) 7ನೇ ಪ್ರಕರಣದ ಮೇರೆಗೆ ತನ್ನ ಮೇಲೆ ಜಾರಿಗೊಳಿಸಿದ ಯಾವುದೇ ನೋಟೀಸನ್ನು ಪಾಲಿಸಲು ವಿಫಲನಾದರೆ ಅಥವಾ ಅಂಥ ಯಾವುದೇ ನೋಟೀಸಿಗೆ ಅನುಸಾರವಾಗಿ ಮಾಡಿದ ಯಾವುದೇ ವರದಿಯಲ್ಲಿ ಅಥವಾ ಹೇಳಿಕೆಯಲ್ಲಿ ತಿಳಿದೂ ತಿಳಿದೂ ಸುಳ್ಳು ಹೇಳಿಕೆಯನ್ನು ಮಾಡಿದರೆ; ಅಥವಾ

(ಸಿ) 8ನೇ ಅಥವಾ 9ನೇ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವಲ್ಲಿ ಯಾರೇ ವ್ಯಕ್ತಿಯನ್ನು ಅಥವಾ ಪ್ರಾಧಿಕಾರವನ್ನು ಅಡ್ಡಿಪಡಿಸಿದರೆ; ಅಥವಾ

(ಡಿ) ಈ ಅಧಿನಿಯಮದ ಇತರ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ

– ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

25. **ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದರೆ, ಆ ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕೆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಹಾಗೂ ತದನುಸಾರವಾಗಿ ದಂಡಿತನಾಗತಕ್ಕದ್ದು;

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯಥೋಚಿತ ಜಾಗರೂಕತೆ ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪ-ಪ್ರಕರಣದಲ್ಲಿರುವುದು ಯಾವುದೂ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷತೆಯ ಕಾರಣದಿಂದ ನಡೆದಿದೆಯೆಂದು ಆರೋಪಿಸಿರುವಲ್ಲಿ ಅಂಥ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

20

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಒಂದು ಫರ್ಮನ್ನು ಮತ್ತು ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಆ ಫರ್ಮಿನ ಪಾಲುಗಾರ.

**26. ಅಪರಾಧಗಳ ಸಂಜ್ಞೇಯತೆ.**– (1) ಈ ಅಧಿನಿಯಮದ ಮೇರೆಗಿನ ಎಲ್ಲ ಅಪರಾಧಗಳೂ, ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ ಮೇರೆಗೆ ಸಂಜ್ಞೇಯವಾದವುಗಳಾಗಿರತಕ್ಕದ್ದು, ಆದರೆ,–

(ಎ) ಪ್ರವೇಶ ಮತ್ತು ಪರಿವೀಕ್ಷಣೆಯ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ಹೊಂದಿದ ವ್ಯಕ್ತಿಯು 8, 14 ಅಥವಾ 17ನೇ ಪ್ರಕರಣಗಳ ಅಥವಾ ಅವುಗಳ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ ಉಲ್ಲಂಘನೆಯ ಸಂಬಂಧದಲ್ಲಿ ಮಾಡಿದ;

(ಬಿ) ಇತರ ಯಾವುದೇ ಉಲ್ಲಂಘನೆಯ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಅಂಥ ದೂರುಗಳನ್ನು ನೀಡಲು ಯಥೋಚಿತವಾಗಿ ಅಧಿಕೃತನಾದ ವ್ಯಕ್ತಿಯು ಮಾಡಿದ

– ಲಿಖಿತ ದೂರಿನ ಆಧಾರದ ಮೇಲೆ ಹೊರತು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಯಾರೇ ವ್ಯಕ್ತಿಯ ಸಂಬಂಧದಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳತಕ್ಕದ್ದಲ್ಲ.

(2) 18ನೇ ಪ್ರಕರಣದ ಉಲ್ಲಂಘನೆಯ ಸಂಬಂಧದಲ್ಲಿನ ವ್ಯವಹರಣೆಗಳನ್ನು ಭಾರತದ ಅಟಾರ್ನಿ ಜನರಲ್ ಅವರ ಸಮ್ಮತಿಯ ಹೊರತಾಗಿ ಹೂಡತಕ್ಕದ್ದಲ್ಲ.

**27. ಅಧಿಕಾರಗಳ ಪ್ರತ್ಯಾಯೋಜನೆ.**– ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೂಲಕ ತನಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಅಥವಾ ವಿಧಿಸಿದ ಯಾವುದೇ ಕರ್ತವ್ಯವನ್ನು ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು,–

(ಎ) ಕೇಂದ್ರ ಸರ್ಕಾರಕ್ಕೆ ಅಧೀನನಾದ ಅಂಥ ಅಧಿಕಾರಿ ಅಥವಾ ಅಂಥ ಪ್ರಾಧಿಕಾರ, ಅಥವಾ

(ಬಿ) ಅಂಥ ರಾಜ್ಯ ಸರ್ಕಾರ ಅಥವಾ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯ ಸರ್ಕಾರಕ್ಕೆ ಅಧೀನನಾದ ಅಂಥ ಅಧಿಕಾರಿ ಅಥವಾ ಪ್ರಾಧಿಕಾರ

– ಸಹ ಚಲಾಯಿಸತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು ಎಂಬುದಾಗಿ ಆದೇಶದ ಮೂಲಕ ನಿರ್ದೇಶಿಸಬಹುದು.

**28. ಇತರ ಕಾನೂನುಗಳ ಪರಿಣಾಮ.**– ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮದ ಹೊರತಾದ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಈ ಅಧಿನಿಯಮದ ಹೊರತಾದ ಯಾವುದೇ ಅಧಿನಿಯಮಿತಿಯ ಕಾರಣದಿಂದಾಗಿ ಪರಿಣಾಮ ಹೊಂದಿರುವ ಯಾವುದೇ ಇತರ ಲಿಖಿತದಲ್ಲಿ, ಇವುಗಳಿಗೆ ಅಸಂಗತವಾದುದು ಏನೇ ಒಳಗೊಂಡಿದ್ದರೂ ಪರಿಣಾಮ ಹೊಂದಿರತಕ್ಕದ್ದು.

**29. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ ಅನುಸಾರ, ಸರ್ಕಾರವು ಅಥವಾ ಯಾರೇ ವ್ಯಕ್ತಿಯು ಅಥವಾ ಪ್ರಾಧಿಕಾರವು ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯದ ಬಗ್ಗೆ ಅದರ ಅಥವಾ ಅವನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**30. ನಿಯಮಗಳನ್ನು ರಚಿಸಲು ಅಧಿಕಾರ.**– (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ,–

(ಎ) ನಿರ್ಬಂಧಿತ ಮಾಹಿತಿ ಎಂದು ಇಲ್ಲಿಯವರೆಗೆ ಪ್ರಕಟಿಸದೇ ಇದ್ದ ಅಥವಾ ಅನ್ಯಥಾ ಸಾರ್ವಜನಿಕವಾಗಿ ಬಹಿರಂಗಗೊಳಿಸದಿದ್ದ ಯಾವುದೇ ಮಾಹಿತಿಯನ್ನು ಘೋಷಿಸುವುದು ಮತ್ತು ಅದರ ಅನಧಿಕೃತ ಪ್ರಸಾರ ಅಥವಾ ಅದರ ಬಳಕೆಯ ವಿರುದ್ಧ ಎಚ್ಚರ ವಹಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ನಿಯಮಿಸಲು;

(ಬಿ) ಯಾವುದೇ ಪ್ರದೇಶವನ್ನು ಅಥವಾ ಯಾವುದೇ ಆವರಣವನ್ನು ನಿಷಿದ್ಧ ಪ್ರದೇಶವೆಂಬುದಾಗಿ ಘೋಷಿಸುವುದು ಮತ್ತು ಅಂಥ ನಿಷಿದ್ಧ ಪ್ರದೇಶದೊಳಗೆ ಅನಧಿಕೃತವಾಗಿ ಪ್ರವೇಶಿಸುವುದರ ಅಥವಾ ಅಲ್ಲಿಂದ ಹೊರ ಹೋಗುವುದರ ವಿರುದ್ಧ ಏರ್ಪಾಟು ಮಾಡಲು ಕೈಗೊಳ್ಳಬೇಕಾದ ಕ್ರಮಗಳನ್ನು ನಿಯಮಿಸಲು;

(ಸಿ) ಯುರೇನಿಯಂ, ಥೋರಿಯಂ ಮತ್ತು ಇತರ ಗೊತ್ತುಪಡಿಸಿದ ಪದಾರ್ಥಗಳ ಶೋಧನೆಗೆ ಸಂಬಂಧಪಟ್ಟ ಮಾಹಿತಿಯನ್ನು ವರದಿ ಮಾಡಲು ಮತ್ತು ಅಂಥ ಶೋಧನೆಗೆ ಬಹುಮಾನಗಳನ್ನು ನೀಡಲು;

(ಡಿ) ಯುರೇನಿಯಂ ಒಳಗೊಂಡ ಪದಾರ್ಥಗಳ ಗಣಿಗಾರಿಕೆಯ ಅಥವಾ ಸಾಂದ್ರೀಕರಣದ ಮೇಲೆ ನಿಯಂತ್ರಿಸಲು;

(ಇ) ಪಾರಿತೋಷಕಗಳು, ಕನಿಷ್ಠ ಬೆಲೆಗಳು ಮತ್ತು ಖಾತರಿಗಳು ಇತರ ಗೊತ್ತುಪಡಿಸಿದ ಪದಾರ್ಥಗಳ ಗಣಿಗಾರಿಕೆ ಮತ್ತು ಅನ್ವೇಷಣೆಯನ್ನೂ ಒಳಗೊಂಡಂತೆ ಲೈಸೆನ್ಸ್ ನೀಡುವ ಮೂಲಕ ವಿನಿಯಮಿಸಲು ಮತ್ತು ರಿಯಾಯಿತಿಗಳನ್ನು ನೀಡುವುದರ ಮೂಲಕ ಪ್ರೋತ್ಸಾಹಿಸಲು;

(ಎಫ್) ನಿಯಮಿಸಿದ ಪದಾರ್ಥಗಳು, ಖನಿಜಗಳು ಮತ್ತು ಸ್ಥಾವರಗಳನ್ನು ಕಡ್ಡಾಯವಾಗಿ ಸ್ವಾಧೀನಪಡಿಸಿಕೊಳ್ಳಲು;

(ಜಿ) ನಿಯಮಿಸಿದ ಪದಾರ್ಥಗಳ ಮತ್ತು ಅಣುಶಕ್ತಿಯನ್ನು ಉತ್ಪಾದಿಸಲು, ಬಳಸಲು ಅಥವಾ ಅನ್ವಯಿಸಲು ಬಳಸಬಹುದೆಂದು ಅಥವಾ ಅದರ ಪರಿಣಾಮವಾಗಿ ಉಂಟಾಗಬಹುದೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವ ಇತರ ಯಾವುದೇ ವಸ್ತುಗಳ ಉತ್ಪಾದನೆಯನ್ನು, ಆಮದನ್ನು, ರಫ್ತನ್ನು, ವರ್ಗಾವಣೆಯನ್ನು, ಶುದ್ಧೀಕರಣವನ್ನು, ಸ್ವಾಧೀನಕ್ಕೆ ತೆಗೆದುಕೊಳ್ಳುವುದನ್ನು, ಮಾರಾಟ ಮಾಡುವುದನ್ನು, ಬಳಕೆಯನ್ನು ಅಥವಾ ವಿಲೇವಾರಿಯನ್ನು ವಿನಿಯಮಿಸಲು;

(ಹೆಚ್) ನಿಯಮಿಸಿದ ಸಾಧನ ಸಾಮಗ್ರಿಯ ಬಳಕೆಯನ್ನು ವಿನಿಯಮಿಸಲು;

(ಐ) ಯಾವುದೇ ಅಣುವಿಕಿರಣಕಾರಿ ಪದಾರ್ಥದ ತಯಾರಿಕೆಯನ್ನು, ಅಭಿರಕ್ಷೆಯನ್ನು, ಸಾಗಣೆಯನ್ನು, ವರ್ಗಾವಣೆಯನ್ನು, ಮಾರಾಟವನ್ನು, ರಫ್ತನ್ನು, ಆಮದನ್ನು, ಬಳಕೆಯನ್ನು ಅಥವಾ ವಿಲೇವಾರಿಯನ್ನು ವಿನಿಯಮಿಸಲು;

(ಜೆ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಆರೋಗ್ಯಕ್ಕೆ ಹಾನಿಕಾರಕವೆಂದು ಘೋಷಿಸಲಾದ, ನಿಯಮಿಸಿದ ಪದಾರ್ಥಗಳ ಸಾಗಾಣಿಕೆಯನ್ನು ವಿನಿಯಮಿಸಲು;

(ಕೆ) ಅಣುಶಕ್ತಿಯ ಉತ್ಪಾದನೆಯನ್ನು, ಅನ್ವಯವನ್ನು ಮತ್ತು ಬಳಕೆಯನ್ನು ಅಭಿವೃದ್ಧಿ ಗೊಳಿಸಲು, ನಿಯಂತ್ರಿಸಲು, ಮೇಲ್ವಿಚಾರಣೆ ಮಾಡಲು ಮತ್ತು ಲೈಸೆನ್ಸ್ ನೀಡಲು;

(ಎಲ್) ಈ ಅಧಿನಿಯಮದ ಮೇರೆಗೆ ಲೈಸೆನ್ಸುಗಳನ್ನು ನೀಡಲು ಶುಲ್ಕಗಳು;

(ಎಂ) ಈ ಅಧಿನಿಯಮದ ಮೇರೆಗೆ ನೋಟೀಸುಗಳನ್ನು ಜಾರಿಗೊಳಿಸುವ ವಿಧಾನ;

(ಎನ್) ಅಣುಶಕ್ತಿಯ ಉತ್ಪಾದನೆ, ಬಳಕೆ, ಅನ್ವಯದ ಮತ್ತು ಆ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅನ್ವೇಷಣೆಯನ್ನು ನಡೆಸಲು ಸಾಮಾನ್ಯವಾಗಿ ವ್ಯಕ್ತಿಗಳೊಳಗೆ, ಸಂಸ್ಥೆಗಳೊಳಗೆ ಮತ್ತು ದೇಶಗಳೊಳಗೆ ಪರಸ್ಪರ ಸಹಕಾರವನ್ನು ವೃದ್ಧಿಗೊಳಿಸಲು

– ಉಪಬಂಧ ಕಲ್ಪಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ, ನಿಯಮಗಳ ಉಲ್ಲಂಘನೆಯು, ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನು ಹೊರತುಪಡಿಸಿ, ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು, ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುವೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

**31. ಈ ಅಧಿನಿಯಮವು ಸರ್ಕಾರಕ್ಕೆ ಬಂಧನಕಾರಿಯಾಗಿರತಕ್ಕದ್ದು.–** ಈ ಅಧಿನಿಯಮದ ಉಪಬಂಧಗಳು ಸರ್ಕಾರಕ್ಕೆ ಬಂಧನಕಾರಿಯಾಗಿರತಕ್ಕದ್ದು.

**32. 1948ರ ಅಧಿನಿಯಮ 29ರ ನಿರಸನ.–** ಅಣುಶಕ್ತಿ ಅಧಿನಿಯಮ, 1948ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

* * * * *